ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾನಿರ್ಣಯದ ಮೇಲಿನ ಚರ್ಚೆ

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಎಂ. ಪಿ. ಪ್ರಕಾಶ್ ರವರು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸತಕ್ಕಂಥ ನಿರ್ಣಯದಲ್ಲಿ ಭಾಗವಹಿಸಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಒಂದು ನಿರ್ಣಯವನ್ನು ನಾನು ವಿರೋಧಿಸಿ ಮಾತನಾಡುತ್ತೇನೆ. ರಾಜ್ಯಪಾಲರ ಭಾಷಣ ನಮಗೆಲ್ಲರಿಗೂ ಕೂಡಾ ಗೊತ್ತಿರುವ ಹಾಗೆ ಇದು ಹೆಸರಿಗೆ ರಾಜ್ಯಪಾಲರ ಭಾಷಣ. ಅದು just to satisfy the constitutional obligation. ಅದಕ್ಕೆ ಅವರು ಹೆಸರನ್ನು ಯಾವಾಗಲೂ ಇಡತಕ್ಕಂಥದ್ದು ಒಂದು ಪದ್ಧತಿ. ಇದೊಂದು ಅಧಿಕೃತ ಭಾಷಣ, ಸರ್ಕಾರಿ ಭಾಷಣ. ಆ ಭಾಷಣವನ್ನು ಸಂಪೂರ್ಣವಾಗಿ ರಾಜ್ಯಸರ್ಕಾರದ ಅರ್ಥಾತ್ ಸಂಪುಟದ ಸಭೆ ನಿರ್ಧಾರ ಮಾಡಿ ಅದನ್ನು ರಾಜ್ಯಪಾಲರ ಬಾಯಿಂದ ಅನ್ನಿಸತಕ್ಕಂಥದ್ದು ಅಥವಾ ಓದಿಸತಕ್ಕಂಥದ್ದು ಒಂದು ಪರಿಪಾಠ ಆ ಒಂದು ಭಾಷಣದ ಬಗ್ಗೆ ಈಗಾಗಲೇ ಕೆಲವು ಪತ್ರಿಕೆಗಳು ಅಗ್ರ ಲೇಖನವನ್ನು ಬರೆದಿವೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮತ್ತು ಅವರು ವಿವರಗಳನ್ನೂ ಸಹ ಕೊಟ್ಟಿದ್ದಾರೆ. ಇದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವೂ ಕೂಡ ಕೆಲವೊಮ್ಮೆ ಬಂದಿದೆ, ಸಹಜ. ನಮ್ಮ ಸದನದಲ್ಲಿ ಈ ಒಂದು ಭಾಷಣದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಪರ ವಿರೋಧವಾಗಿ ಹೇಳುವುದೂ ಕೂಡ ಸಹಜ. ಕಾರಣ ಪಕ್ಷದ ಒಂದು ಶಿಸ್ತು ಅರ್ಥಾತ್ ಅಧಿಕಾರರೂಢವಾಗಿರತಕ್ಕಂಥ ಪಕ್ಷ ತನ್ನ ಸದಸ್ಯರಿಗೆ ಕೊಡತಕ್ಕಂಥ ಒಂದು ಆದೇಶವಾಗಿದೆ. ಅವರು ಅದಕ್ಕೆ ಬೆಂಬಲ ಕೊಡಬೇಕು ಎಂದು ಇರುವುದರಿಂದ ಈ ಸದನದಲ್ಲಿ ಅದು ಒಪ್ಪಿಗೆಯನ್ನು ಪಡೆಯತಕ್ಕಂಥ ಸಂದರ್ಭದಲ್ಲಿ ಅಂಥದ್ದು ಹೆಚ್ಚಾಗಿರುತ್ತದೆ. ಆದರೆ ಈ ವಿಧಾನಮಂಡಲದಲ್ಲಿ ಮಾಡತಕ್ಕಂಥ ರಾಜ್ಯಪಾಲರ ಭಾಷಣದಲ್ಲಿ ಅಡಗಿರತಕ್ಕಂಥ ಅಂಶ ನಮ್ಮ ರಾಜ್ಯದ ಪ್ರಗತಿಯ ವಿಚಾರದಲ್ಲಿ ಅಥವಾ ಸಾರ್ವಜನಿಕ ಪ್ರಶ್ನೆಗಳನ್ನು ಪ್ರಸ್ತಾಪ ಮಾಡತಕ್ಕಂಥ ವಿಚಾರದಲ್ಲಿ ಅಥವಾ ಜನಜೀವನವನ್ನು ಮೇಲಕ್ಕೆ ಎತ್ತತಕ್ಕಂಥ ವಿಚಾರದಲ್ಲಿ ಹೆಚ್ಚಾಗಿ ತನ್ನ ರೂಪರೇಖೆಗಳ ಮುಖಾಂತರ ಬೆಳಕು ಚೆಲ್ಲಬೇಕು. ರಾಜ್ಯದ ಆರ್ಥಿಕ ಪ್ರಗತಿ ಬಗ್ಗೆಯಾಗಲಿ ಅಥವಾ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕಂಥ ಬಗ್ಗೆಯಾಗಲಿ ಆದರೆ ಬಡ್ಜೆಟ್ ಮಂಡನೆ ಆಗತಕ್ಕಂಥ ಕಾಲದಲ್ಲಿ ಮಂಡಿಸುವ ವಿಚಾರದಲ್ಲಿ ಆದರೆ ಅದೇ ಬೇರೆಯಾಗಿರುತ್ತದೆ. ಆದರೆ ಇದರಲ್ಲಿ ರಾಜ್ಯದ ಸರ್ವತೋಮುಖವಾದ ಅಭಿವೃದ್ಧಿಗೋಸ್ಕರವಾಗಿ ಏನಾದರೂ ಒಂದು ನಿರ್ಣಯ ಇರಬೇಕು. ಆ ವಿಚಾರ ವಿದ್ಯುತ್ ಉತ್ಪಾದನೆಯಾಗಿ ಇರಬಹುದು ಅಥವಾ ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಾಗಿರಬಹುದು, ಯಾವ ಯಾವ ಧೋರಣೆಗಳನ್ನು ಯಾವ ಯಾವ ವಿಚಾರದಲ್ಲಿ ಧಾರೆ ಎರೆಯಬೇಕು ಎಂದರೆ ಇದರ ಹಿನ್ನೆಲೆ ಬಹುಶಃ ಇದನ್ನು ರೂಪಿಸತಕ್ಕಂಥ ವಿಚಾರದಲ್ಲಿ ತಾರತಮ್ಯ ಅನುಸರಿಸದೇ ಒಂದೇ ರೀತಿಯಾಗಿದೆ ಅನ್ನುವಂಥ ಒಂದು ಸ್ಥೂಲ ಪರಿಚಯ ಮಾಡಿ ಕೊಡುವುದೇ ಈ ರಾಜ್ಯಪಾಲರ ಭಾಷಣದ ಉದ್ದೇಶ. ಅದು ಸಾಮಾಜಿಕ ಪ್ರಗತಿಯಾಗಿರಬಹುದು ಅಥವಾ ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿರಬಹುದು ಅಥವಾ ಶಾಲೆಯ ಬಗ್ಗೆ ಆಗಿರಬಹುದು ಅಥವಾ ಅದು ವಿದ್ಯಾಭ್ಯಾಸದ ವಿಚಾರವಾಗಿರಬಹುದು ಹೀಗೆ ಇರುತ್ತವೆ. ಅದರಲ್ಲಿ ವಿವಿಧ ಮುಖಗಳನ್ನು ಹೊಂದಿರತಕ್ಕಂಥ ಅಥವಾ ವಿವಿಧ ಇಲಾಖೆಗಳನ್ನು ಹೊಂದಿರತಕ್ಕಂಥ ಸರ್ಕಾರದ ಇಲಾಖೆಗಳ ಮುಖಾಂತರ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಸಮಸ್ಯೆಗಳು ಏನು ಇವೆ ಅದಕ್ಕೆ ಪರಿಹಾರವನ್ನು ಕಂಡುಹಿಡಿಯತಕ್ಕಂಥ ವಿಚಾರದಲ್ಲಿ ಸೂಕ್ಷ್ಮ ಪರಿಚಯವನ್ನು ತೋರಿಸುವುದಲ್ಲದೆ, ಅವುಗಳ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ರೂಪಿಸಬೇಕು ಎನ್ನುವುದು ರಾಜ್ಯಪಾಲರ ಭಾಷಣದಲ್ಲಿ ಇರಬೇಕು. ಈ ರಾಜ್ಯಪಾಲರ ಭಾಷಣದ ಒಂದು ಪ್ರತಿಯನ್ನು ನಾನು ನೋಡಿದಾಗ ನನಗೆ ಏನು ಅನಿಸಿತು ಎಂದರೆ ಇದು ಒಂದು ನೀರಸ ಭಾಷಣ ಎಂದು. ನಮ್ಮ ರಾಜ್ಯಾಂಗದಲ್ಲಿರತಕ್ಕಂಥ ಒಂದು ವಿಧಿಯನ್ನು ಅನುಸರಿಸಿ ನಮ್ಮನ್ನು ಸಮಾಧಾನ ಮಾಡಬೇಕೆನ್ನುವ ಉದ್ದೇಶದಿಂದ ಮಾಡಿರತಕ್ಕಂಥ ಭಾಷಣ ಎಂದು ನನಗೆ ಅನಿಸಿತು. ಉದಾಹರಣೆಗೆ ಹೇಳುವುದಾದರೆ ನಾನು ಒಂದು ವಿಷಯವನ್ನು ಈ ಸಭೆಯ ಮಾನ್ಯ ಸದಸ್ಯರ ಹಾಗೂ ಈ ಸದನದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ತಾವು ಇದನ್ನು ಓದಿ ನೋಡಬೇಕು. ನಮ್ಮ ಸಮಾಜದಲ್ಲಿ ನಮ್ಮ ರಾಜ್ಯದಲ್ಲಿ ಅಲ್ಲ ರಾಷ್ಟ್ರದಲ್ಲೂ ತೆಗೆದುಕೊಂಡರೆ ಶೇಕಡ ೭೦ರಷ್ಟು ಇರತಕ್ಕಂಥ ಕೃಷಿಕರು ಹಾಗೂ ಕೃಷಿ ಕಾರ್ಮಿಕರು ಏನು ಇದ್ದಾರೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವರ ಬಗ್ಗೆ ಯಾವುದೇ ಒಂದು ವಿಚಾರವನ್ನು ಈ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡದೇ ಇರುವುದನ್ನು ನೋಡಿದರೆ ಇದು ನೀರಸವಾಗುವುದಿಲ್ಲವೇ? ಪ್ರಮುಖವಾಗಿರತಕ್ಕಂಥ ಅಥವಾ ಮಹತ್ವವಾಗಿರತಕ್ಕಂಥ ಇಂತಹ ಅಂಶಗಳನ್ನು ಪ್ರಸ್ತಾಪ ಮಾಡದೇ ಇರತಕ್ಕಂಥದ್ದನ್ನು ನೋಡಿದರೆ ಇದು ಒಂದು ಸರ್ಕಾರೀ ಭಾಷಣ ಎಂದು ನಾನು ತಿಳಿಯಬೇಕಾಗುತ್ತದೆ. ಈ ದೇಶದಲ್ಲಿ ಈ ಒಂದು ವರ್ಗಕ್ಕೆ ಸೇರಿರತಕ್ಕಂಥ ಜನತೆಯ ಸಮಸ್ಯೆ ಬಗ್ಗೆ ಯಾವರೀತಿಯಾಗಿ ಪರಿಹಾರ ನೀಡಬಹುದು ಎನ್ನುವುದು ಬೇಡವೇ? ಸಾಮಾನ್ಯವಾಗಿ ಕೃಷಿಕರಿಗೆ ಸಂಬಂಧಪಟ್ಟ ಯೋಜನೆಗಳ ವಿವರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕೇ ಹೊರತು ಕೇವಲ ಅವರ ಹೆಸರನ್ನು ಹೇಳಿಬಿಟ್ಟರೆ ಸಾಕಾಗುವುದಿಲ್ಲ. ಕೃಷಿಕರ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಪರಿಹಾರ ಕಂಡುಹಿಡಿಯಲು ಸರ್ಕಾರ ಏನೇನು ತೀರ್ಮಾನ ತೆಗೆದುಕೊಂಡಿದೆ ಎಂಬುದನ್ನು ಇದರಲ್ಲಿ ಹೇಳಬೇಕಾಗುತ್ತದೆ. ಇದೇ ನನ್ನ ಮಾತಿನ ಅರ್ಥ. ಆದರೆ ಈ ಒಂದು ಭಾಷಣದಲ್ಲಿ ಇದು ಯಾವುದನ್ನೂ ನೋಡುವುದಕ್ಕೆ ಸಾಧ್ಯವಿಲ್ಲ. ನನಗೆ ಮಾತ್ರವಲ್ಲ, ಯಾರಿಗೂ ಸಾಧ್ಯವಾಗುವುದಿಲ್ಲ.

ಇನ್ನು ಇದರಲ್ಲಿ ಬರಗಾಲದ ಬಗ್ಗೆ ಪ್ರಸ್ತಾಪವಾಗಿದೆ. ಈ ಬರಗಾಲದ ವಿಚಾರವನ್ನು ಬಿಟ್ಟು ಬಿಟ್ಟರೆ ಈ ಜನತಾ ಸರ್ಕಾರ ಅಸ್ತಿತ್ವದಲ್ಲಿರುವುದಕ್ಕೆ ಸಾಧ್ಯವೇ ಇಲ್ಲ. ಇದು ಇವರಿಗೆ ಒಂದು ಮಹಾನ್ ಅಸ್ತ್ರವಾಗಿದೆ. ಈ ಬರಗಾಲ ಕೆಲವೊಮ್ಮೆ ಸರ್ಕಾರವನ್ನು ತಿನ್ನುತ್ತದೆ ಮತ್ತೆ ಕೆಲವೊಮ್ಮೆ ಈ ಸರ್ಕಾರವನ್ನು ಉಳಿಸುತ್ತದೆ. ಬರಗಾಲ ಬಂದಾಗ ರಾಜ್ಯಸರ್ಕಾರವನ್ನು ಉಳಿಸುವುದು ಕೇಂದ್ರ ಸರ್ಕಾರ ತನ್ನ ಸಹಾಯವನ್ನು ನೀಡುವುದರ ಮೂಲಕ. ಕಳೆದವರ್ಷ ನಮ್ಮ ರಾಜ್ಯದ ಬಡ್ಜೆಟ್ ಅಧಿವೇಶನ ಮುಗಿದ ನಂತರ ಕೇಂದ್ರ ಸರ್ಕಾರ ಬರಗಾಲಕ್ಕಾಗಿ ಹಣವನ್ನು ಮಂಜೂರು ಮಾಡಿತು. ಪ್ರಧಾನಮಂತ್ರಿಗಳು ಸಹ ಆ ಸಮಯದಲ್ಲಿ ನಮ್ಮ ರಾಜ್ಯಕ್ಕೆ ಬಂದು ಹೋದರು. ಆ ಸಂದರ್ಭದಲ್ಲಿ ನಾನು ವಿರೋಧಪಕ್ಷದ ನಾಯಕನಾಗಿ ೧೨ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದೆ. ಅಧಿವೇಶನ ಪ್ರಾರಂಭವಾದ ಕಾರಣ ಬೇರೆ ಜಿಲ್ಲೆಗಳಿಗೆ ಹೋಗಲು ಸಾಧ್ಯವಾಗಲಿಲ್ಲ. ನನ್ನ ಪ್ರವಾಸದ ವಿವರಗಳನ್ನೆಲ್ಲಾ ಇಲ್ಲಿ ಹೇಳಿದ್ದೇನೆ. ಪ್ರಧಾನಮಂತ್ರಿಗಳು ಬೆಂಗಳೂರು ನಗರಕ್ಕೆ ಬಂದಾಗ ೫೦ ಕೋಟಿ ರೂಪಾಯಿಗಳ ಕೇಂದ್ರದ ನೆರವನ್ನು ಪ್ರಕಟಣೆ ಮಾಡಿದರು. ನಂತರ ಈ ಹಣ ಅಲ್ಲಿಂದ ರಾಜ್ಯಸರ್ಕಾರಕ್ಕೆ ಬಂತು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಹಮದಾಬಾದ್‌ನಲ್ಲಿ ಕೊಟ್ಟ ಹೇಳಿಕೆ ಪತ್ರಿಕೆಗಳಲ್ಲಿ ಬಂದಿದೆ. ಸುಮಾರು ನೂರನಾಲ್ಕುವರೆ ಕೋಟಿ ರೂಪಾಯಿಗಳು ಕೇಂದ್ರಸರ್ಕಾರದಿಂದ ಬರಗಾಲ ಪರಿಹಾರಕ್ಕೆಂದು ಬಂದಿದೆ. ಈ ಬಗ್ಗೆ ನಾನು ವಿವರಗಳಿಗೆ ಹೋಗುವುದಿಲ್ಲ. ಈ ಹಿಂದೆ ಎಲ್ಲ ವಿವರಗಳನ್ನು ಕೊಟ್ಟಿದ್ದೇನೆ. ಕೇಂದ್ರದಿಂದ ಮತ್ತೆ ೫೦ ಕೋಟಿ ರೂಪಾಯಿಗಳ ನೆರವು ಬಂದಮೇಲೆ ಬರಗಾಲದ ಬಗ್ಗೆ ಇವರು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತೋ ಅದನ್ನೆಲ್ಲಾ ಹಾಕಿಕೊಳ್ಳಲು ಇವರ ಕೈಯಲ್ಲಿ ಸಾಧ್ಯವಾಗಲಿಲ್ಲ. ಜನರು ಕೆಲಸಕ್ಕಾಗಿ ಊರು ಬಿಟ್ಟು ಹೋಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿದರು. ಆದರೆ ಅದರ ಪ್ರಕಾರ ನಡೆದುಕೊಳ್ಳಲಿಲ್ಲ. ನಿಮ್ಮ ಕಾರ್ಯಕ್ರಮಗಳ ಒಂದು ವೈಫಲ್ಯದಿಂದ ಜನರು ಊರು ಬಿಟ್ಟು ಹೋದರು. ನಿಮ್ಮ ಕಾರ್ಯಕ್ರಮಗಳಲ್ಲಿ ಯಾವ ಒಂದು ಸಾಫಲ್ಯವನ್ನೂ ಕಾಣದಿದ್ದರಿಂದ ಜನರು ಗುಳೆಕಿತ್ತುಕೊಂಡು ಹೋದರು. ಕೇಂದ್ರ ಸರ್ಕಾರದವರು ಹೆಚ್ಚುವರಿಯಾಗಿ ೫೦ ಕೋಟಿ ರೂಪಾಯಿಗಳನ್ನು ಕೊಟ್ಟಮೇಲೆ ಅದು ನಿಮ್ಮ ಭಾಷಣಕ್ಕೆ ಹೆಚ್ಚಿನ ಉತ್ತೇಜನ ನೀಡಿತೇ ಹೊರತು ಜನರಿಗೆ ಯಾವ ಅನುಕೂಲವೂ ಅದರಿಂದ ಆಗಲಿಲ್ಲ. ಕೇಂದ್ರದಿಂದ ಬಂದ ಹಣದ ಲೂಟಿ ವ್ಯಾಪಕವಾಗಿ ನಡೆಯಿತು. ಇದು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾಗದೆ ಬಹು ಪ್ರದೇಶಗಳಲ್ಲಿ ಹಣದ ಲೂಟಿ ನಡೆಯಿತು. ಈ ಬರಗಾಲದ ಕಾರಣ ಅನೇಕ ಜನರು ತಮ್ಮ ಊರುಗಳನ್ನು ಬಿಟ್ಟು ಬೇರೆ ಕಡೆಗಳಿಗೆ ಹೋದರು. ಮತ್ತೆ ಕೆಲವು ಕಡೆಗಳಲ್ಲಿ ಜನರು ತಮಗೆ ದುಡಿಯಲು ಕೆಲಸ ಮತ್ತು ಕುಡಿಯಲು ನೀರು ಬೇಕು ಎಂದು ಚಳುವಳಿ ಮಾಡಿದರು. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಬಿಜಾಪುರ ಜಿಲ್ಲೆಯ ತೊಗಲಬಾವಿ ಎಂಬಲ್ಲಿ ಜನರು ಈ ರೀತಿ ಚಳುವಳಿ ಮಾಡಿದ್ದರಿಂದ ಅವರ ಮೇಲೆ ಪೋಲೀಸರು ಮೊಕದ್ದಮೆ ಹೂಡಿದ್ದಾರೆ. ಅಲ್ಲಿನ ಮಹಿಳೆಯರು ಮತ್ತು ನಾಗರೀಕರ ಮೇಲೆ ಚಾರ್ಜ್‌ಷೀಟ್ ಹಾಕಿರುವುದರ ನಂ. ೨೩/೮೬, ತಾರೀಖು ೨೧-೭-೧೯೮೬. ಅವರು ಚಳುವಳಿ ಮಾಡಿದ್ದು ೧೦-೫-೧೯೮೬ರಂದು. ಅಲ್ಲಿನ ಜನರು ರಾಸ್ತಾರೋಕೋ ಚಳುವಳಿ ಮಾಡಿದ್ದರಿಂದ ಅವರ ಮೇಲೆ ಕೇಸ್ ಹಾಕಿದ್ದಾರೆ. ಈ ಕೇಸ್‌ನಲ್ಲಿ ೧೨ ಜನ ಹೆಣ್ಣುಮಕ್ಕಳು ಮತ್ತು ೧೮ ಜನ ಪುರುಷರು ಒಳಗಾಗಿದ್ದಾರೆ. ಇವರೆಲ್ಲರೂ ೩೦ ಕಿಲೋಮೀಟರ್ ದೂರದ ಕೋರ್ಟಿಗೆ ಅಲೆಯುತ್ತಿದ್ದಾರೆ. ಅವರು ನಮಗೆ ದುಡಿಯುವುದಕ್ಕೆ ಕೆಲಸ ಕೊಡಿರಿ ಎಂದು ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಪುಸ್ತಕದಲ್ಲಿ ಹೇಳಿದ್ದಾರೆ. ಪ್ರತಿಯೊಂದು ಮನೆಗೆ ಉದ್ಯೋಗ ಎಂದು ಹೇಳಿರುವುದು ನನಗೆ ಗೊತ್ತಿದೆ. ಚುನಾವಣೆ ಕಾಲದಲ್ಲಿ ೧೯೮೫ ರಲ್ಲಿ ಹೊರಡಿಸಿದ ಪ್ರಣಾಳಿಕೆಯಲ್ಲಿ ಟಿ.ವಿ. ಸಂದರ್ಶನ

ನಡೆಯಿತು, ಆಗ ಒಬ್ಬರು ನೋಡಿ ಸ್ವಾಮಿ, ನೀವು ಮನೆಮನೆಗೆ ಉದ್ಯೋಗ ಕೊಡುತ್ತೇವೆ ಎಂದು ಹೇಳಿದ್ದೀರಲ್ಲ ಅದಕ್ಕಾಗಿ ಯಾವ ಕಾರ್ಯಕ್ರಮ ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಉದ್ಯೋಗ ಎನ್ನುವುದು ರಾಜ್ಯಾಂಗ ಬದ್ಧವಾದ ಹಕ್ಕು ಇರಬಹುದು, ಉದ್ಯೋಗ ಎಂದ ತಕ್ಷಣ ನೌಕರಿ ಕೊಡುತ್ತೇವೆ ಎಂದು ಅಲ್ಲ, ಬೇರೆ ಬೇರೆ ರೀತಿಯಲ್ಲಿ ಸಹಾಯ ಮಾಡುತ್ತೇವೆ ಎಂದು ಹೇಳಿದರು. ಖಾಯಂ ಉದ್ಯೋಗ ಕೊಡುವುದಿರಲಿ, ಈ ಜನ ನಮಗೆ ಕೂಲಿ ಮಾಡುವುದಕೋಸ್ಕರ ಉದ್ಯೋಗ ಕೊಡಿ ಎಂದು ಕೇಳಿದರು. ಬರಗಾಲ ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ಖಜಾನೆಯಿಂದ ಖರ್ಚಾಗತಕ್ಕಂಥ, ಕೇಂದ್ರ ಸರ್ಕಾರದ ಯಾವುದೆ ಹಣವನ್ನು ಖರ್ಚು ಮಾಡಿ ನಮಗೆ ಉದ್ಯೋಗ ಕೊಡಿ, ರೋಡ್, ಬಿಲ್ಡಿಂಗ್, ಕೆಲಸ, ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಮುಂತಾದ ಹತ್ತಾರು ಕಾರ್ಯಕ್ರಮಗಳನ್ನು, ಯಾವುದಾದರೂ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಿ, ನಮಗೆ ಉದ್ಯೋಗ ಕೊಡಬೇಕು ಎಂದು ಕೇಳಿದರು. ಈ ರೀತಿ ಉದ್ಯೋಗ ಕೇಳಿದ ಜನರ ಮೇಲೆ ಚಾರ್ಜ್‌ಶೀಟ್ ಹಾಕಿದ್ದಾರೆ. ೫೬ ಜನ ಹೆಣ್ಣು ಮಕ್ಕಳು ಬಂದು ಹೋದರು. ಇದಕ್ಕೆ ಸಂಬಂಧಪಟ್ಟ ದಾಖಲೆಯ ಟ್ರೂ ಕಾಪಿಯನ್ನು ಕಳಿಸಿಕೊಟ್ಟಿದ್ದಾರೆ, ಐದಾರು ಹರಿಜನ ಹೆಣ್ಣು ಮಕ್ಕಳ ಹೆಸರು ಇದೆ. ಸೋಮವ್ವ, ಸಿದ್ದರಾಮ ಹರಿಜನ, ಜಾತಮ್ಮ, ಲಕ್ಷ್ಮೀಬಾಯಿ ಹೀಗೆಲ್ಲಾ ಇದೆ. ಸಾಮಾನ್ಯವಾಗಿ ಹರಿಜನರಿಗೆ ಆಸ್ತಿ ಇರುವುದೇ ಕಡಿಮೆ ಬರೀ ಕೂಲಿ ಮೇಲೆ ಜೀವನ ಮಾಡತಕ್ಕವರು. ಇವರಲ್ಲಿ ಭೂಮಿ ಇರತಕ್ಕವರೂ ಕೂಡ ಕೂಲಿ ಮಾಡಬೇಕಾಗುತ್ತದೆ, ಏಕೆಂದರೆ ಬರಗಾಲ ಬಂದುಬಿಟ್ಟಿದೆ. ೫೦ ವರ್ಷದ ತಮ್ಮಣ್ಣ, ೪೫ ವರ್ಷದ ಗುಂಡಪ್ಪ, ಹಗರಪ್ಪ, ಜೌರಿ ಮುಂತಾದ ಹೆಸರುಗಳು ಇವೆ. ನಾನು ಹೆಸರುಗಳನ್ನು ಸಂಪೂರ್ಣವಾಗಿ ಓದುವುದಕ್ಕೆ ಹೋಗುವುದಿಲ್ಲ. ಈ ರೀತಿ ಜನ ಕೂಲಿ ಕೇಳಿದವರ ಮೇಲೆ, ಉದ್ಯೋಗ ಕೇಳಿದವರ ಮೇಲೆ ನೀವು ಚಾರ್ಜ್‌ಶೀಟ್ ಹಾಕಿ ಕೋರ್ಟಿಗೆ ಅಲೆಸುತ್ತಾ ಇದ್ದೀರಿ. ಈ ವಿಚಾರವನ್ನು ಈ ಸಂದರ್ಭದಲ್ಲಿ ಇಲ್ಲಿಗೆ ಬಿಡುತ್ತೇನೆ. ಬರಗಾಲ ನಮಗೆ ಅನ್ಯಾಯ ಮಾಡಿತು ಎಂದು ಪದೇ ಪದೇ ಹೇಳುವುದು. ನೀವು ಕೇಂದ್ರದಿಂದ ಹಣ ಪಡೆಯುವುದಕೋಸ್ಕರ. ಮಾನ್ಯ ಸಭಾಧ್ಯಕ್ಷರೆ, ಚುನಾವಣೆ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ. ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳ ಕಾಲದಲ್ಲಿ ಏನೇನು ಆಯಿತು ಎನ್ನುವುದರ ಬಗ್ಗೆ ಚರ್ಚೆ ಸಾಧಾರಣವಾಗಿ ಆಗಿದೆ. ನಿಜವಾಗಿಯೂ ವಿವರಗಳಿಗೆ ಹೋಗಬೇಕಾಗಿತ್ತು ಚುನಾವಣೆಗೆ ಸಂಬಂಧಪಟ್ಟ ಹಾಗೆ ಎಷ್ಟೊಂದು ಅಕ್ರಮಗಳನ್ನು ಮಾಡಿದಿರಿ. ಡಾಕ್ಯುಮೆಂಟರಿ ಎವಿಡೆನ್ಸ್ ಮಾತ್ರ ನಾನು ಪ್ರಸ್ತಾಪ ಮಾಡಿದ್ದೇನೆ. ಹಣ, ಹೆಂಡ, ಖಂಡ, ತುಂಡಗಳ ಬಗ್ಗೆ ಎಲ್ಲಾ ಪ್ರಸ್ತಾಪವಾಗಿದೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಚುನಾವಣೆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಇದೆ. ಅದರಲ್ಲಿ ಪ್ರಜಾಪ್ರಭುತ್ವವನ್ನು ಇವರಿಗೆ ಕೊಟ್ಟಿದ್ದೇವೆ, ವಿಕೇಂದ್ರೀಕರಣ ಮಾಡಿದ್ದೇವೆ ಎನ್ನುವ ವಾದವನ್ನು ಪ್ರತಿಪಾದನೆ ಮಾಡಿದ್ದಾರೆ. ಜನರ ಕೈಗೆ ಅಧಿಕಾರ ಕೊಡತಕ್ಕಂಥ ಒಂದು ಪಾಪ, ಅಚ್ಚ ಹೊಸ ಹೆಸರಿನ ಉವಾಚ ಎನ್ನತಕ್ಕಂಥ ದೃಷ್ಟಿಯಿಂದ ಪ್ರತಿಪಾದನೆ ಮಾಡಿದರು. ಚುನಾವಣೆ ಕಾಲದಲ್ಲಿ ಯಾವ ರೀತಿಯಲ್ಲಿ ಅನ್ಯಾಯಗಳು ನಡೆದಿವೆ ಜನರ ಕೈಗೆ ಅಧಿಕಾರ ಕೊಡುತ್ತೇವೆಂದು ಹೇಳಿ ಚುನಾವಣೆ ಮಾಡಿದ್ದೀರಿ. ಯಾವ ಮಟ್ಟದಲ್ಲಿ, ಅಧಿಕಾರವನ್ನು ದುರುಪಯೋಗ ಮಾಡಿದ್ದೀರಿ, ಮುಂದೆ ಕೂಡ ಮಾಡುತ್ತೀರಿ. ಬೀದರ್ ಜಿಲ್ಲೆ ಔರಾದ್ ತಾಲ್ಲೂಕು, ಸಂತಾಪೂರ್ ಜಿಲ್ಲಾ ಪರಿಷತ್ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಚುನಾವಣೆಯಲ್ಲಿ ನೇರ ಸೆಣಸಾಟ ಜನತಾ ಮತ್ತು ಕಾಂಗ್ರೆಸ್ (ಐ) ಅಭ್ಯರ್ಥಿಗಳಲ್ಲಿತ್ತು. ಮಲ್ಲಿಕಾರ್ಜುನ ಆಶಾಪೂರ್ ಜನತಾ ಅಭ್ಯರ್ಥಿ, ಇವರಿಗೆ ೬,೨೭೮ ಮತಗಳು, ಶರಣಪ್ಪ ಬಾಳೂರು ಕಾಂಗ್ರೆಸ್ ಅಭ್ಯರ್ಥಿ ಇವರಿಗೆ ೬,೧೫೨ ಮತಗಳು ಬಂದಿವೆ. ಪೋಲಿಂಗ್ ಸ್ಟೇಷನ್ ೧೧೧ರಲ್ಲಿ ಆಶಾಪೂರ್‌ಗೆ ೨೬೨ ಮತಗಳು, ಕಾಂಗ್ರೆಸ್ ಅಭ್ಯರ್ಥಿಗೆ ೮೮ ಮತಗಳು ಬಂದಿರುವುದು ದಾಖಲಾಗಿದೆ. ಕಾಲಗೆಟ್ಟ ಮತಗಳು ಬೇಕಾಗಿಲ್ಲ, ಇಲ್ಲಿ ತಪ್ಪಾಗಿ ಎಣಿಕೆ ಮಾಡಿದ್ದಾರೆ ಕಣ್ಣೆದುರಿಗೆ ತಪ್ಪಾಗಿದೆಯೆಂದು, ರೀಕೌಂಟ್‌ಗೆ ಅರ್ಜಿ ಕೊಟ್ಟಿದ್ದಾರೆ, ಸಂಬಂಧಪಟ್ಟ ಚುನಾವಣಾಧಿಕಾರಿ ಅಕ್‌ನಾಲೆಡ್ಜ್‌ಮೆಂಟ್ ಕೊಟ್ಟಿದ್ದಾರೆ. ಚುನಾವಣಾಧಿಕಾರಿ ಪಕ್ಷದ ಅಭ್ಯರ್ಥಿಯಾಗಿರುವುದಿಲ್ಲ. ಅಕ್ರಮಗಳು ನಡೆದಿವೆಯೆಂದೂ ದೂರು ಕೊಟ್ಟರೂ, ರೀ ಕೌಂಟ್‌ಗೆ ಅರ್ಜಿ ಕೊಟ್ಟರೂ ಅದನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಜಿಲ್ಲಾಧಿಕಾರಿಯವರಿಗೆ ದೂರು ಕೊಟ್ಟ ಮೇಲೆ ಮತ ಪೆಟ್ಟಿಗೆಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು, ಸಂಪೂರ್ಣ ವರದಿಯನ್ನು ರಾಜ್ಯ ಸರ್ಕಾರಕ್ಕೆ, ವಿಭಾಗಾಧಿಕಾರಿಯವರಿಗೆ, ಚೀಫ್ ಸೆಕ್ರೆಟರಿಯವರಿಗೆ ಕಳುಹಿಸಿ ಕೊಟ್ಟಿದ್ದಾರೆ. ೮೬ ಜನತಾಕ್ಕೆ, ೨೪೨ ಕಾಂಗ್ರೆಸ್‌ಗೆ ಬಂದಿದ್ದರೆ, ನಮ್ಮ ಅಭ್ಯರ್ಥಿ ಗೆಲ್ಲುತ್ತಿದ್ದರು, ಇಲ್ಲಿ ತಪ್ಪು ಆಗಿದೆ. ಇದರ ಬಗ್ಗೆ ಏನು ಮಾಡಬೇಕೆಂದು ಕ್ಲಾರಿಫಿಕೇಷನ್ ಕೇಳಿ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ವರದಿ ಮಾಡಿದ್ದಾರೆ. ಜಿಲ್ಲಾಧಿಕಾರಿಯವರು ಏನು ಪತ್ರ ವ್ಯವಹಾರ ಮಾಡಿದ್ದಾರೆ, ಅದನ್ನು ದಯವಿಟ್ಟು ಸದನದ ಮುಂದಿಡಿ. ತಪ್ಪು ಮಾಡಿಲ್ಲ ಎಂದರೆ ಒಪ್ಪಿಕೊಳ್ಳೋಣ, ತಪ್ಪಾಗಿದ್ದರೆ ಅದರ ವಿಚಾರ

ಮಾಡೋಣ. ಅಧಿಕಾರಿಗಳು ಪಕ್ಷದ ಒತ್ತಡಕ್ಕೆ ಒಳಗಾಗಿ ಯಾವ ರೀತಿ ಕೆಲಸ ಮಾಡಿದ್ದಾರೆನ್ನುವುದು ಇದರಿಂದ ಗೊತ್ತಾಗುತ್ತದೆ. ಸಬ್ಜೆಕ್ಟ್ ಟು ವೆರಿಫಿಕೇಷನ್, ಮೂರು ಜನ ಅಧಿಕಾರಿಗಳು ಈಗಾಗಲೇ ಸಸ್ಪೆಂಡ್ ಆಗಿದ್ದಾರೆಂದು ಗೊತ್ತಾಗಿದೆ. ಈ ರೀತಿ ನಡೆದಿರುವಾಗ ನೀವು ಮುಕ್ತ ಚುನಾವಣೆ ಮಾಡಿದ್ದೇವೆಂದು ಯಾವ ರೀತಿ ಹೇಳುತ್ತೀರಿ ? ಧಾರವಾಡ ಜಿಲ್ಲೆಯಲ್ಲಿ ಮಂಡಲ್ ಪಂಚಾಯಿತ್ತಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಯಾವ ರೀತಿ ತಪ್ಪು ಮಾಡಿದ್ದಾರೆನ್ನುವುದನ್ನು ಹೇಳುತ್ತಿದ್ದೇನೆ. ನರೇಂದ್ರ ಮಂಡಲ್ ಪಂಚಾಯಿತ್ತಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕುಮಾರ ದೇಸಾಯಿ ಮಲ್ಲನಗೌಡ, ಶ್ರೀಮತಿ ಗೌರವ್ವ ಕಲ್ಲಪ್ಪ ಹೆಣ್ಣು ಮಗಳು ಸಾಮಾನ್ಯ ಸೀಟಿನಿಂದ ಕಣದಲ್ಲಿ ಜನತಾ ೨, ಕಾಂಗ್ರೆಸ್ ೨ ಅನೆ ಗುರ್ತಿನಿಂದ ಸ್ವತಂತ್ರ್ಯವಾಗಿ ನಿಂತಿದ್ದಾರೆ. ೯ನೇ ತಾರೀಖು ನಾಮಪತ್ರವನ್ನು ವಾಪಸ್ಸು ತೆಗೆದು ಕೊಳ್ಳಬೇಕಾಗಿತ್ತು.

೪-೦೦ ಪಿ. ಎಂ.

ನಾಮಪತ್ರದ ಮೇಲುಗಡೆ ಕುಮಾರ್ ದೇಸಾಯಿ ಮಲ್ಲನಗೌಡ ಕೈಗುರುತು. ಅನಂತರ ಶ್ರೀಮತಿ ಗೌರವ್ವ ಕಲ್ಲಪ್ಪ ಕೈಗುರುತು ಮೊದಲು ಇಟ್ಟಿದ್ದರು. ರುದ್ರಪ್ಪ ಶಂಕರಪ್ಪ ಕುಮಾರ್ ದೇಸಾಯಿ ಆನೆ ಗುರುತು, ಇಂಡಿಪೆಂಡೆಂಟ್ ಬಂತು. ಕೈ ಗುರುತು ಎರಡು ಮೊದಲು ಮೇಲುಗಡೆ ಇತ್ತು. ಕೆಳಗಡೆ ಚಕ್ರದೊಳಗಿನ ನೇಗಿಲ ಹೊತ್ತ ರೈತ ಶಿವರುದ್ರಪ್ಪ ವಿರುಪಾಕ್ಷಪ್ಪಾ ಸೋಗಿ ಇವರುದು ಇತ್ತು. ಅಷ್ಟೊತ್ತೆ ಚುನಾವಣಾಧಿಕಾರಿಯುವರಿಂದ ಬೇರೆ ಬರೆಯಿಸಿದರು. ಕೈಗುರುತು ಎರಡು ಇಡಬೇಡಿ, ಒಂದು ಮೇಲೆ ಒಂದು ಕೆಳಗಡೆ ಇಡಿ ಎಂದು ಹೇಳಿದರು. ಆದರೂ ಕೂಡ ಈ ಅಧಿಕಾರಿ ಏನು ಮಾಡಿದ್ದಾರೆಂದರೆ ಕುಮಾರ್ ದೇಸಾಯಿ ಮಲ್ಲನಗೌಡ, ಕೈ ಗುರುತು ಮೇಲುಗಡೆ ಇಟ್ಟರು. ಎರಡನೆಯ ಸ್ಥಾನದಲ್ಲಿ ಕುಮಾರ್ ದೇಸಾಯಿ ರುದ್ರಪ್ಪ ಶಂಕರಪ್ಪ, ಇವರದು ಆನೆ ಗುರುತು, ಇದನ್ನು ಇಟ್ಟರು. ಶ್ರೀಮತಿ ಗೌರವ್ವ ಕಲ್ಲಪ್ಪ ಗಬ್ಬೂರ ಸ್ಟಾರ್ ಮಾರ್ಕ್ ಇರತಕ್ಕ ಕೈ ಗುರುತು ಇಟ್ಟರು. ಇಂಡಿಪೆಂಡೆಂಟ್ ಹಾಕಿದ್ದವನು ನನ್ನದು ಮೂರನೆಯ ಜಾಗದಲ್ಲಿ ಇದೆ ಎಂದು ಹೇಳಿ, ಅವನು ಮೊದಲೇ ಪ್ರಿಂಟ್ ಮಾಡಿಸಿದ್ದ. ಅವನಿಗೆ ಅನಂತರ ಎರಡನೆಯ ಜಾಗಕ್ಕೆ ತೆಗೆದುಕೊಂಡು ಬಂದು ಹಾಕಿದರು, ಇದು ಅನ್ಯಾಯವಾಗುವುದಿಲ್ಲವೇ? ಚುನಾವಣೆಯ ಅಧಿಕಾರಿಗಳ ಕೈವಾಡ ಯಾವ ರೀತಿಯಾಗಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಯಾವ ರೀತಿಯಲ್ಲಿ ಜನತಾ ಪಕ್ಷದಿಂದ ಒತ್ತಡ ಏರುತ್ತಿದ್ದರು ಎನ್ನುವ ಬಗ್ಗೆ, ಉದಾಹರಣೆ ಕೊಡುತ್ತಿದ್ದೇನೆ. ಮತ್ತೊಂದು ಉದಾಹರಣೆ ನಮ್ಮ ತಾಲ್ಲೂಕಿನದು ಇದೆ. ಅದು ಸಹ ಮಂಡಲ್ ಪಂಚಾಯತ್‌ಗೆ ಸಂಬಂಧಪಟ್ಟ ಹಾಗೆ ಇದೆ. ಅವರು ಕೊಟ್ಟಿರತಕ್ಕ ಒರಿಜಿನಲ್ಸ್ ಇಲ್ಲೇ ಇದೆ. ಸೊರಬ ತಾಲ್ಲೂಕು ಚುನಾವಣಾಧಿಕಾರಿಗಳು ಕೊಟ್ಟಿರತಕ್ಕ ಎರಡು ಒರಿಜಿನಲ್ ಡಾಕ್ಯುಮೆಂಟ್ಸ್ ಇಲ್ಲಿ ಇವೆ. ಅದಕ್ಕೆ ಸೀಲ್ ಹಾಕಿ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಒರಿಜಿನಲ್ ಡಾಕ್ಯುಮೆಂಟ್ಸ್‌ನಲ್ಲಿ ಏನಿದೆ ಅದನ್ನು ಓದಿ ಹೇಳುತ್ತೇನೆ.

ಹುಲಿಮರಡಿ ಎಂಬುದು ಒಂದು ಕ್ಲಸ್ಟರ್ ಆಫ್ ವಿಲೇಜಸ್‌ನಲ್ಲಿ ಬರುತ್ತದೆ. ಮಂಡಲ ಪಂಚಾಯಿತಿಗೆ ಶ್ರೀ ಗಣಪತಿ ಬಿನ್ ಮಲ್ಲಪ್ಪ ಇವರು ಉಡವಿ ಚುನಾವಣಾ ಕ್ಷೇತ್ರದಲ್ಲಿ ನಾಗರಾಜಗೌಡ ಬಿನ್ ಮಲ್ಲಪ್ಪಗೌಡ ಇವರು ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಂದ ಪಕ್ಷದ ಚಿಹ್ನೆ ಕೊಡಲು, ಫೋಟೋ ಸ್ಟೇಟ್ ಕಾಪಿಯಲ್ಲಿ ಅಭ್ಯರ್ಥಿಯ ಹೆಸರು ನಮೂದಿಸಿ ಕೊಟ್ಟಿರುವ ಬಗೆ ಹಿಂಬರಹ ಕೇಳಿ, ಅರ್ಜಿ ಸಲ್ಲಿಸಿರುವುದು ಸರಿಯಷ್ಟೆ. ಈ ಬಗ್ಗೆ ಸದರಿ ಉಡುವಿ ಚುನಾವಣಾ ಕ್ಷೇತ್ರದಿಂದ ಜನತಾ ಪಕ್ಷದ ಅಭ್ಯರ್ಥಿ ಎಂದು ಅರ್ಜಿ ಸಲ್ಲಿಸಿದ ನಾಗರಾಜಗೌಡ ಬಿನ್ ಮಲ್ಲಪ್ಪಗೌಡ ಇವರುಗಳು, ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯವರ ಫೋಟೊ ಸ್ಟೇಟ್ ಕಾಪಿಯಲ್ಲಿ ಹೆಸರು ನಮೂದಿಸಿ ಅಭ್ಯರ್ಥಿಯ ನೇಮಕಾತಿ ನೋಟೀಸ್ ಕೊಟ್ಟಿರುವುದು ನಿಜವಿರುತ್ತದೆಂದು ಈ ಮೂಲಕ ತಿಳಿಯಪಡಿಸಿರುತ್ತದೆ. ಮತ್ತೊಂದು ೯ನೇ ಜನವರಿ ೧೯೮೭ರಂದು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕೊನೇ ದಿವಸ. ಅದೇ ತಾರೀಖಿನಂದು ೯ನೇ ಜನವರಿ ೧೯೮೭ ಎಗ್ರೈನ್ ಸೀಲ್ಡ್ ಅಂಡ್ ಸೈನ್ಡ್ ಪೇಪರ್ ಒರಿಜಿನಲ್. ಸೊರಬ ತಾಲ್ಲೂಕು ಗುಡವಿ ಮಂಡಲ್ ಪಂಚಾಯತ್ ಚುನಾವಣೆಗೆ ಸಂಬಂಧಪಟ್ಟಂತೆ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಂದ ಅಂದರೆ ಜನತಾ ಪಕ್ಷದ ಅಭ್ಯರ್ಥಿಗಳನ್ನು ಗುಡವಿ ಮಂಡಲಿಗೆ ನಿಲ್ಲಿಸುವ ಬಗ್ಗೆ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯತ್ ಸಮಿತಿಗಳು ಹಾಗೂ ನ್ಯಾಯ ಪಂಚಾಯತಿ ಸಮಿತಿ ಚುನಾವಣೆ ನಿಯಮಾವಳಿ

ಭಾಗ ೨೨ನೇ (ಸಿ) ಕಲಂನಲ್ಲಿ ಮುಖ್ಯ ಚುನಾವಣಾಧಿಕಾರಿಗಳ ಇತ್ತೀಚಿನ ಆದೇಶದಂತೆ ಶ್ರೀ ಬಿ. ಎಲ್. ಶಂಕರ್, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಜನತಾ ಪಕ್ಷ ಬೆಂಗಳೂರು ಇವರಿಂದ ಪಕ್ಷದಿಂದ ನಿಲ್ಲಿಸಿದಂಥ ಅಭ್ಯರ್ಥಿಗಳ ನೋಟೀಸ್ ೯ನೇ ಜನವರಿ ೧೯೮೭ರಲ್ಲಿ ಮಧ್ಯಾಹ್ನ ೨ ಗಂಟೆ ೪೫ ನಿಮಿಷದೊಳಗೆ ಅಂದರೆ ಮೂರು ಗಂಟೆಯೊಳಗೆ ಕೊಡಬೇಕೆಂದು ಸ್ವೀಕೃತವಾಗಿರುತ್ತದೆ. ಆದರೆ ಸಬ್ಜೆಕ್ಟ್ ಟು ಕರೆಕ್ಷನ್ ಅದು ಕೂಡ ನಾವೇ ಹೇಳಿದ ಹಾಗೆ, ಫೋಟೋ ಸ್ಟೇಟ್ ಕಾಪಿ, ಅದು ಒರಿಜಿನಲ್ ಅಲ್ಲ. ಆದರೆ, ಸದರಿ ಪಕ್ಷದ ಅಭ್ಯರ್ಥಿಯಿಂದ ಸದರಿ ನೋಟೀಸ್ ೯ನೇ ಜನವರಿ ೧೯೮೭ರಲ್ಲಿ ಮೂರು ಗಂಟೆಯೊಳಗೆ ಸ್ವೀಕೃತವಾಗಿರುವುದಿಲ್ಲವೆಂದು ತಿಳಿದು ಬರುತ್ತದೆ. ಇದನ್ನು ಕೂಡ ನಾವು ಬಹಳ ಕಷ್ಟಪಟ್ಟು ತೆಗೆದುಕೊಳ್ಳಬೇಕಾಯಿತು. ಇದರ ಅರ್ಥ ಅಧ್ಯಕ್ಷರೆ, ಫೋಟೋ ಸ್ಟೇಟ್ ಕಾಪಿ ಕೊಟ್ಟು ಕೂಡ ಮಾಡಲಿಕ್ಕೆ ಆಗಿಲ್ಲ, There are no rules where photostat copy can be produced to get an election symbol. Original has to be produced. ಇಡೀ ಒಂದು ತಾಲ್ಲೂಕಿನಲ್ಲಿ ಫೋಟೋ ಸ್ಟೇಟ್ ಕಾಪಿಗಳನ್ನೆಲ್ಲಾ ತಂದು ಮನಸ್ಸಿಗೆ ಬಂದ ಹೆಸರುಗಳನ್ನೆಲ್ಲಾ ಬರೆದುಕೊಂಡಿದ್ದಾರೆ. ಜನತಾ ಪಕ್ಷದ ಅಧ್ಯಕ್ಷರ ಲೆಟರ್ ಬಂದಿಲ್ಲ. ಬರೀ ಫೋಟೋ ಸ್ಟೇಟ್ ಕಾಪಿಯ ಮೇಲೆ ಜನತಾ ಪಕ್ಷದ ಸಿಂಬಲ್ ಕೊಟ್ಟಿದ್ದಾರೆ. ಏಕೆಂದರೆ ಫೋನ್‌ಗಳ ಮೇಲೆ ಫೋನು, ಒತ್ತಡದ ಮೇಲೆ ಒತ್ತಡ, ತಹಶೀಲ್ದಾರ್ ಅವರನ್ನು ಒರಿಜಿನಲ್ ಡಾಕ್ಯುಮೆಂಟ್ಸ್ ಇಲ್ಲದೆ ಸಿಂಬಲ್ ಅಲಾಟ್‌ಮೆಂಟ್ ಹೇಗೆ ಮಾಡಿದಿರಿ ಎಂದು ಕೇಳಿದಾಗ ಅಲ್ಲಿ ಒರಿಜಿನಲ್ ಡಾಕ್ಯುಮೆಂಟ್ ಇಲ್ಲ. ಇವರು ಜನತಾ ಪಕ್ಷಕ್ಕೆ ತಲೆ ಬಾಗಲೇಬೇಕಲ್ಲವೇ? ನಾನು ಹಿಂದೆಯೂ ಕೂಡ ಒಮ್ಮೆ ಭಾಷಣವನ್ನು ಮಾಡುವಾಗ ಹೇಳಿದ್ದೆ. ಜನತಾ ಅಭ್ಯರ್ಥಿ ೪೫ ಮತಗಳಿಂದ ಸೋತ. ನಮ್ಮ ಪಕ್ಷದವರು ೪೫ ಮತಗಳಿಂದ ಗೆದ್ದರು. ಆಗ ನಮ್ಮ ಪಕ್ಷಕ್ಕೆ ೯ ಅವರ ಪಕ್ಷಕ್ಕೆ ೭ ಸೀಟುಗಳು ಬಂದಿದ್ದುವು. ಆದರೆ ಅದನ್ನು ಹೇಗಾದರೂ ಮಾಡಿ ೮-೮ ಎಂದು ಸಮನಾಗಿ ಮಾಡಬೇಕೆಂಬ ದೃಷ್ಟಿಯಿಂದ ೪೫ ಮತಗಳನ್ನು ಹೆಚ್ಚು ತೆಗೆದುಕೊಂಡು ಗೆದ್ದಂಥ ನಮ್ಮ ಪಕ್ಷದ ಅಭ್ಯರ್ಥಿಯನ್ನು ಬಿಟ್ಟು ಅವರ ಪಕ್ಷದ ಅಭ್ಯರ್ಥಿಯು ಜಯಗಳಿಸಿದ್ದಾನೆಂದು ಡಿಕ್ಲೇರ್ ಮಾಡಿದರು. ಕೊನೆಗೆ ನಾವು ಡೆಪ್ಯುಟಿ ಕಮಿಷನರ್‌ರವರ ಹತ್ತಿರ ಹೋಗಿ ಇದರ ಬಗ್ಗೆ ಜಗಳ ಮಾಡಿದಾಗ ರಾತ್ರಿ ೧೧ ಗಂಟೆಗೆ ಡಿಕ್ಲೇರ್ ಮಾಡಿದರು. ಮತ್ತು ಅವರಿಗೂ ನೀವು ಮಾಡಿದ್ದು ಸರಿಯಲ್ಲ ಎಂದು ಅಡ್ವೈಸ್ ಮಾಡಿದರು. ಕಾನೂನು ಪ್ರಕಾರ ೪೫ ಮತಗಳನ್ನು ಹೆಚ್ಚಿಗೆ ತೆಗೆದುಕೊಂಡಿರತಕ್ಕ ಕಾಂಗ್ರೆಸ್ ಅಭ್ಯರ್ಥಿಯನ್ನೇ ಡಿಕ್ಲೇರ್ ಮಾಡಬೇಕೆಂದು ಹೇಳಿದರು. ಎಂದರೆ ನಿಮ್ಮ ಅಧಿಕಾರಿಗಳು ಯಾವ ಮಟ್ಟದಲ್ಲಿ ಹೋಗುತ್ತಿದ್ದಾರೆಂಬುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಫೋಟೋಸ್ಟ್ಯಾಟ್ ಕಾಪೀಸ್ ಮೇಲೆ ಏನೇನು ಮಾಡಿದ್ದಾರೆಂಬುದನ್ನು ನಾನು ಹೇಳುತ್ತೇನೆ. ತಹಸೀಲ್ದಾರರು ಮತ್ತಿತರ ಅಧಿಕಾರಿಗಳು ಸೇರಿಕೊಂಡು ಈ ರೀತಿ ಮಾಡಿದ್ದಾರೆ. ನಾವು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಯಾವುದೇ ರೀತಿಯ ಅನ್ಯಾಯವನ್ನೂ ಮಾಡಿಲ್ಲ, ಒಳ್ಳೆಯ ನೀತಿಯಿಂದ ನಾವು ಕೆಲಸ ಮಾಡಿದ್ದೇವೆಂದು ಹೇಳಬಹುದು. ನಿಮ್ಮ ಸಿಂಬಲ್ ಮೇಲೆ ಎಷ್ಟು ಓಟು ಬಂದಿದೆ ಏನು ಎಂಬುದು ಪ್ರತ್ಯೇಕವಾದ ಮಾತು. ಆದರೆ ಒಂದು ಕಾನೂನನ್ನು ಮಾಡಿದಮೇಲೆ ಆ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ತರತಕ್ಕ ಕೆಲಸವನ್ನು ನಿಮ್ಮ ಅಧಿಕಾರಿಗಳು ಮಾಡಬೇಕು. ಆದರೆ ನಿಮ್ಮ ಅಧಿಕಾರಿಗಳನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದೀರೆಂಬುದನ್ನು ನಾನು ಹೇಳುತ್ತೇನೆ. ಇದೇ ರೀತಿ ಜಿಲ್ಲಾ ಪರಿಷತ್ ಚುನಾವಣೆಗೆ ಸಂಬಂಧಪಟ್ಟಂತೆ ಕಾರವಾರ ಜಿಲ್ಲಾ ಸಿದ್ದಾಪುರ ತಾಲೂಕಿಗೆ ಸಂಬಂಧಪಟ್ಟಿದ್ದು. ಈ ಚುನಾವಣೆ ಆದಮೇಲೆ ಅದರ ಪರಿಣಾಮ ಯಾವರೀತಿ ಆಯಿತು ಎಂದರೆ ಮತದಾರರು ಮತವನ್ನು ಕೊಟ್ಟಮೇಲೆ ಏನಾಗುತ್ತದೆ ಎಂಬುದನ್ನು ನಾನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ತಮಗೆಲ್ಲಾ ಗೊತ್ತಿರುವಹಾಗೆ ಜನವರಿ ೨೦ಕ್ಕೆ ಮಂಡಲ್ ಪಂಚಾಯತ್ ಚುನಾವಣೆ ನಡೆಯಿತು. ರಾಜ್ಯದಲ್ಲಿ ಎಲ್ಲಾ ಕಡೆಯೂ ಒಂದೇಸಾರಿ, ಒಂದೇ ದಿವಸ ಮತದಾನವಾಗಿದೆ. ದೊಡ್ಡಮನೆ ಪ್ರದೇಶ ಎಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಹುಟ್ಟಿದ ಊರು. ಅಲ್ಲಿ ಒಟ್ಟು ೧೩ ಸೀಟುಗಳ ಪೈಕಿ ಕಾಂಗ್ರೆಸ್‌ಗೆ ೧೧ ಮತ್ತು ಜನತಾಕ್ಕೆ ೨ ಸೀಟುಗಳು ಬಂದುವು. ಇದು ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕ ವಿಚಾರ. ಅದು ಏನೇ ಇರಲಿ, ಇದರಲ್ಲಿ ಸಿದ್ದಾಪುರ ತಾಲೂಕು ಮತ್ತು ಕುಮಟಾ ತಾಲೂಕು ಬಾರ್ಡರ್‌ಗೆ ಹುಲಿಗೆಕೊಡ್ಲು ಎಂದು ಒಂದು ಜಾಗ ಇದೆ. ಅದು ಫಾರೆಸ್ಟ್ ಲ್ಯಾಂಡ್. ಇದು ಆರ್. ವಿ. ನಾಯಕ್‌ರವರ ಕ್ಷೇತ್ರಕ್ಕೆ ಬರುತ್ತದೆ. ಆದರೆ ಅದರ ಪಕ್ಕದಲ್ಲೇ ದೊಡ್ಡಮನೆ ಗ್ರಾಮ ಎಂದು ಇನಿದೆ ಇದು ಮಂಡಲ್ ಪಂಚಾಯತ್‌ಗೆ ಬಂತು. ಅಲ್ಲಿ ಒಂದು ಬೀಳಗೋಡು ಎಂದು ಗ್ರಾಮ ಇದೆ. ಅಲ್ಲಿ ಒಬ್ಬ ವ್ಯಕ್ತಿ ಹುಲಿಯ ಬೊಮ್ಮೇಗೌಡ ಎನ್ನುವವನು ಕಡು ಬಡವ. ೧೯೫೨ನೇ ಇಸವಿಯಿಂದ ಅವನು ಆ ಫಾರೆಸ್ಟ್ ಲ್ಯಾಂಡ್‌ನ್ನು ಸಾಗುವಳಿ ಮಾಡುತ್ತಿದ್ದ.

ಆ ಸರ್ವೆ ನಂ. ೨೯. ನಾವು ಆ ಜಾಗವನ್ನು ರಸ್ತೆಯಲ್ಲಿ ಹೋಗುವಾಗ, ಬರುವಾಗ ನೋಡಿದ್ದೇವೆ. ಆ ವ್ಯಕ್ತಿ ಅಲ್ಲಿ ಮನೆ ಕಟ್ಟಿಕೊಂಡು ತೆಂಗಿನ ಮರಗಳನ್ನೂ ಕೂಡ ಬೆಳೆಸಿಕೊಂಡಿದ್ದಾನೆ. ತೆಂಗಿನಕಾಯಿ ಗಳೂ ಬಿಡುತ್ತಿವೆ. ಆ ಊರಿನಲ್ಲಿ ೧೩ ಸೀಟುಗಳ ಪೈಕಿ ೧೧ ಸೀಟು ಕಾಂಗ್ರೆಸ್‌ಗೆ ಮತ್ತು ೨ ಸೀಟು ಗಳು ಜನತಾಕ್ಕೆ ಬಂತು. ಮೊದಲು ಒಂದೇ ಒಂದು ಸೀಟು ಇತ್ತು. ಇನ್ನೊಂದು ಅನ್-ಕಂಟೆಸ್ಟೆಡ್ ಸೀಟು. ನಾವು ಮೊದಲು ಕಂಟೆಸ್ಟ್ ಮಾಡಿದ್ದು ೧೨ ಸೀಟುಗಳಿಗೆ. ಇನ್ನೊಂದು ಸೀಟಿಗೆ ನಾವು ಕಂಟೆಸ್ಟ್ ಮಾಡುವಂತಿರಲಿಲ್ಲ. ಇದರಲ್ಲಿ ಒಂದು ಸೀಟು ಹೋಯಿತು. ಅಂದರೆ ೨ ಸೀಟು ಹೋದರೂ ಕೂಡ ನಮಗೆ ೧೧ ಸೀಟು ಬಂತು. ಇಷ್ಟೆಲ್ಲಾ ಆದಮೇಲೆ ರಾಮಕೃಷ್ಣ ಹೆಗಡೆಯವರಿಗೆ ಮತ್ತು ಅವರ ಮನೆತನದವರಿಗೆ ಇದನ್ನು ನೋಡಿ ಸಿಟ್ಟುಬಂತು. ಏಕೆಂದರೆ ಚುನಾವಣೆ ಸಂದರ್ಭ ದಲ್ಲಿ ಇವರು ಅವರ ಪರವಾಗಿ ಪ್ರಚಾರ ಮಾಡಿದವರು. ನಾನು ಆಪಾದನೆ ಮಾಡಬೇಕೆಂಬ ಉದ್ದೇಶ ದಿಂದ ಈ ಮಾತನಾಡುತ್ತಿಲ್ಲ. ಅವರ ಹೆಸರು ಗಣೇಶ ಹೆಗಡೆ ಎಂದು, ಅವರ ಮೇಲೆ ಕೋರ್ಟ್‌ ನಲ್ಲಿ ಕೇಸು ಇದ್ದು ಇನ್ನೂ ಬೇರೆ ಬೇರೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪತ್ರಿಕೆಗಳಲ್ಲಿ ಬಂದಿದೆ. ಅವರ ವಿವರಕ್ಕೆ ನಾನು ಈಗ ಹೋಗುವುದಿಲ್ಲ. ಬಗರ್ ಹುಕ್ಕುಂ ಸಾಗುವಳಿ ಎಂದು ನಮ್ಮ ಓಲ್ಡ್ ಮೈಸೂರಿನಲ್ಲಿ ಕರೆಯುತ್ತಾರೆ. ಅಲ್ಲಿ ಅವರು ಏನು ಮಾಡಿದರು ಎಂದರೆ. ಮೊನ್ನೆ ನಡೆದಂಥ ಚುನಾವಣೆಯಲ್ಲಿ ಪಂಚಾಯತಿಯನ್ನು ಹಿಡಿದುಕೊಳ್ಳು ತ್ತಾರೆಂದು ಕಾಂಗ್ರೆಸ್‌ನವರಿಗೆ ಓಟು ಕೊಟ್ಟುಬಿಡುತ್ತಾರೆನ್ನುವ ಕಾರಣಕ್ಕಾಗಿ ಒಬ್ಬ ಫಾರೆಸ್ಟ್ ಗಾರ್ಡ್‌ರ ವರನ್ನು ಊರು ಬಿಟ್ಟು ಬಹಳ ದೂರ ಹಾಕಿಬಿಟ್ಟಿರುತ್ತಾರೆ. ಅಲ್ಲಿ ನೀರು ಕೂಡ ದೊರೆಯುವುದಿಲ್ಲ. ೨೦-೨೫ ಮೈಲಿ ದೂರ ಹೋದರೂ ಯಾವ ಊರು ಅವರಿಗೆ ಸಿಕ್ಕುವುದಿಲ್ಲ. ಅದು ದೀಪ್ ಮಲೆ ನಾಡು ಏರಿಯಾ ಎಲ್ಲಿಗೆ ಹೋದರೂ ಕೂಡ ಅವರು ಮತ್ತೆ ಮನೆಗೆ ಬಂದೇ ಊಟವನ್ನು ಮಾಡಬೇಕು ಇದು ಪಶ್ಚಿಮ ಘಟ್ಟದ ಬಹಳ ಮಧ್ಯದಲ್ಲಿ ಬರುತ್ತದೆ. ಈ ರೀತಿ ಮಾಡಿ ಸನ್ಮಾನ್ಯ ಅಧ್ಯಕ್ಷರೇ ಏನು ಮಾಡಿ ದ್ದಾರೆಂದರೆ ಅವರ ಮನೆಯನ್ನು ಪೂರ್ತಿ ಹಾಳು ಮಾಡಿದ್ದಾರೆ. ಏತಕ್ಕೆಂದರೆ ಮಾನ್ಯ ಮುಖ್ಯಮಂತ್ರಿ ಗಳದು ದೊಡ್ಡ ಮನೆ ಪತ್ರಿಕೆಗಳಲ್ಲೆಲ್ಲ ಬಂದಿದೆ. ಮರ್ಯಾದೆ ಹೊರಟು ಹೋಯಿತೆಂದು ಹೇಳಿ ಯಾರು ಯಾರು ಓಟ್ ಕಾಂಗ್ರೆಸ್‌ಪಾರ್ಟಿಗೆ ಕೊಟ್ಟಿದ್ದಾರೆ ಅವರ ಮನೆಗಳನ್ನು ಧ್ವಂಸ ಮಾಡತಕ್ಕಂಥ ಕೆಲಸ ಅಲ್ಲಿ ನಡೆದಿದೆ. ಇದು ಸಂಪೂರ್ಣವಾಗಿ ಚುನಾವಣೆಯಾದ ಮೇಲೆ ಆಗಿರತಕ್ಕಂಥ ಅನ್ಯಾಯ ಸಂಪೂರ್ಣವಾಗಿ ಬಡವರ ಮೇಲೆ ಗಧಾ ಪ್ರಹಾರ ಚುನಾವಣೆಯಾದ ಮೇಲೆ ಆಗಿರತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಷ್ಟು ಹೇಳಿ ಚುನಾವಣೆಯ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ, ಬೇರೆ ಸಂದರ್ಭ ಬಂದಾಗ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದಲ್ಲಿ ಹಸಿರು ಕಾರ್ಡುಗಳ ಬಗ್ಗೆ ಹೇಳುತ್ತಾ ೨೩ ಲಕ್ಷ ಇರತಕ್ಕಂಥದ್ದಕ್ಕೆ ಮತ್ತೆ ೭ ಲಕ್ಷ ಸೇರಿಸಿ ಒಟ್ಟು ೩೦ ಲಕ್ಷ ಕವರ್ ಮಾಡಿದ್ದೇವೆಂದು ಹೇಳಿದ್ದಾರೆ. ೩೧ ಲಕ್ಷ ಗ್ರೀನ್ ಕಾರ್ಡ್ ಕವರ್ ಮಾಡಿದ್ದೇವೆಂದು ಈ ಸದನದಲ್ಲಿ ಹೇಳುತ್ತಿದ್ದಾರೆ. ಆದರೆ ಬಡವರಿಗೆ ಇಂದಿಗೂ ಕೂಡ ಅದು ದೊರೆತ್ತಿಲ್ಲ. ಹಸಿರು ಕಾರ್ಡು ನೌಕರರಿಗೆ ಒಂದೊಂದು ಮನೆಗೆ ಮೂರು ಮೂರು ನಾಲ್ಕು ನಾಲ್ಕು ಕೊಟ್ಟಿರತಕ್ಕಂಥದ್ದನ್ನು ಸ್ಪಷ್ಟಪಡಿಸಿದ್ದೇವೆ. ೩೦-೪೦ ಎಕರೆ ಜಮೀನು ಇರತಕ್ಕಂಥವರಿಗೂ ಹಸಿರು ಕಾರ್ಡು ಕೊಟ್ಟಿರತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ೩೧ ಲಕ್ಷ ಗ್ರೀನ್ ಕಾರ್ಡ್ ಕೊಟ್ಟಿರುವವರಿಗೆ ಅಕ್ಕಿಯನ್ನು ಸಪ್ಲೈ ಮಾಡಿರುವುದು, ಇದಕ್ಕಾಗಿ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂಥ ಹಣದ ಮತ್ತು ಇತರ ಅಂಕಿ ಅಂಶಗಳನ್ನು ಕೂಡ ಪ್ರಸ್ತಾಪ ಮಾಡಿದ್ದೇವೆ. ಇಷ್ಟಾದರೂ ಕೂಡ ಬಡವರಿಗಾಗಿ. ಬಡವರಿಗೋಸ್ಕರವಾಗಿ ಯಾವ ಕಾರ್ಯಕ್ರಮ ಗಳನ್ನು ಹಾಕಿಕೊಂಡು ಮಾಡುತ್ತಿದ್ದೇವೆಂದು ತಾವು ಹೇಳುತ್ತಿರುವಿರೋ ಅದರಿಂದ ಅವರು ಸಂಪೂರ್ಣ ವಾಗಿ ವಂಚಿತರಾಗಿದ್ದಾರೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ ಹಿಂದೆ ೧೯೮೬ನೇ ಇಸವಿ ಮಾರ್ಚ್‌ವರೆಗೆ ಕವರ್ ಮಾಡಿರತಕ್ಕಂಥದ್ದು ೨೫.೭೩ ಹೆಕ್ಟೇರ್ಸ್. ಈ ೧೯೮೬-೮೭ಕ್ಕೆ ೨೨೧.೨ ಕೋಟಿ ನೀವು ನೀರಾವರಿಗೆ ಖರ್ಚುಮಾಡಿ ೬೫ ಸಾವಿರ ಹೆಕ್ಟೇರ್ಸ್ ಸಣ್ಣ ನೀರಾವರಿ, ೫ ಸಾವಿರ ಹೆಕ್ಟೇರ್ಸ್‌ಗೆ ಎಂದು ನಿಮ್ಮ ಪ್ಲಾನಿಂಗ್‌ನಲ್ಲಿ ಇರತಕ್ಕಂಥದ್ದು ಎಂದು ನನಗನ್ನಿಸುತ್ತದೆ. ಈಗ ಅದರ ವಿವರಕ್ಕೆ ಹೋಗುವುದಿಲ್ಲ. ಪಿ.ಡಬ್ಲ್ಯು.ಡಿ ವಿಚಾರ ಬಂದಾಗ ಮಾತನಾಡೋಣ ಮತ್ತೆ ೧೯೮೩-೮೪,೮೫-೮೬ ಈ ನಾಲ್ಕು ವರ್ಷಗಳ ಅವಧಿಯಲ್ಲಿ ಎಷ್ಟು ಪ್ರದೇಶ ಕವರ್ ಮಾಡಿದ್ದೀರಿ ಎಂದರೆ, ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ ಬೇಸಿನ್ ಯೋಜನೆ ಮತ್ತು ಬೇರೆ ಬೇರೆ ಯೋಜನೆಗಳು ಮೀಡಿಯಮ್ ಮೈನರ್ ಇರಿಗೇಷನ್ ಇನ್‌ಕ್ಲೂಡಿಂಗ್ ಅಂಡರ್‌ಗ್ರೌಂಡ್ ವಾಟರ್, ಬೋರ್‌ವೆಲ್ ಇತ್ಯಾದಿ, ಇತ್ಯಾದಿ ಎಲ್ಲಾ ಸೇರಿ ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ಎಷ್ಟು ವೇಗದಲ್ಲಿ ಮಾಡಿತ್ತೋ ಅಷ್ಟು ವೇಗವನ್ನೂ ಕೂಡ ನೀವು

ಮೇಂಟೈನ್ ಮಾಡಲಿಕ್ಕೆ ಆಗಲಿಲ್ಲ. ಭೂಸುಧಾರಣೆ ಬಗ್ಗೆ ಪದೇ ಪದೇ ಒಂದು ಮಾತನ್ನು ಹಿಂದಿನ ಸಾರಿ ಸರ್ಕಾರದ ಗಮನಕ್ಕೆ ತಂದಿದ್ದೆ. ಈ ಸಾರಿ ಎಕ್ಸ್ ಲ್ಯಾಂಡ್‌ಲಾರ್ಡ್ಸ್‌ಗೆ ಬಾಂಡ್ಸ್ ಮುಖಾಂತರ ಹಣ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಕೊಡಿ ಬೇಡ ಎಂದು ಹೇಳುವುದಿಲ್ಲ. ಸಣ್ಣಪುಟ್ಟ ಲ್ಯಾಂಡ್ ಲಾರ್ಡ್ಸ್‌ಗೆ ಅರ್ಜೆಂಟಾಗಿ ಕೊಡಿ ಎಂದು ಹೇಳಿದ್ದೇವೆ. ಗೇಣಿದಾರರು ಪಿ.ಎಲ್.ಡಿ. ಬ್ಯಾಂಕಿಗೆ ಕಟ್ಟಬೇಕಾದ ಕಂತಿನ ಹಣ ಏನಿದೆ ಅದಕ್ಕೆ ನೋಟೀಸ್ ಜಾರಿ ಆಗಿದೆ. ಸರ್ಕಾರದವರು ಒಂದು ಹೇಳಿಕೆ ಕೊಟ್ಟು ಆ ಹಣವನ್ನು ನಾವು ತುಂಬುತ್ತೇವೆ, ಇಷ್ಟು ಎಕರೆವರೆಗೆ ಇರತಕ್ಕ ಗೇಣಿದಾರರು ಹಣ ತುಂಬಬೇಕಾಗಿಲ್ಲವೆಂದು ಹೇಳಿದ್ದರು. ಅದರಲ್ಲಿ ಇಷ್ಟು ವೆಟ್‌ಲ್ಯಾಂಡ್, ಡ್ರೈಲ್ಯಾಂಡ್ ಇರಬೇಕೆಂದೆಲ್ಲ ಹೇಳಿದ್ದರು. ಈಗ ನಾನು ಆ ವಿವರಕ್ಕೆ ಹೋಗುವುದಿಲ್ಲ. ಸದನದಲ್ಲಿ ಗೇಣಿದಾರರಿಗೆ ಕಂತಿನ ಹಣವನ್ನು ಮಾಫಿ ಮಾಡಿದ್ದೇವೆಂದು ಹೇಳಿದ್ದೀರಿ ಅವರ ಬಗ್ಗೆ ಸರ್ಕಾರಿ ಆಜ್ಞೆ ಏನಿದೆ ಅದು ಪಿ.ಎಲ್.ಡಿ. ಬ್ಯಾಂಕಿಗೆ ಹೋಗದೇ ಇರುವುದರಿಂದ ಗೇಣೀದಾರರ ಆಸ್ತಿಯನ್ನು ಹರಾಜು ಮಾಡುವುದಕ್ಕೆ ಪಿ.ಎಲ್.ಡಿ. ಬ್ಯಾಂಕಿನವರು ನೋಟೀಸ್ ಕೊಟ್ಟು ಈಗಾಗಲೇ ಅನೇಕ ಕಡೆಗಳಲ್ಲಿ ಬಹಳಷ್ಟು ಗೇಣೀದಾರರ ಆಸ್ತಿಯನ್ನು ಹರಾಜು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ಗೇಣೀದಾರರಿಂದ ಸರ್ಕಾರಕ್ಕೆ ಬರಬೇಕಾದ ಪ್ರೀಮಿಯಂ ಅನ್ನು ೧೦ ಎಕರೆಯೊಳಗೆ ಇರುವವರಿಗೆ ವಜಾ ಮಾಡುತ್ತೇವೆಂದು ಹಿಂದೆಯೇ ಹೇಳಿದ್ದೇವೆ. ಆದರೆ ಪಿ.ಎಲ್.ಡಿ. ಬ್ಯಾಂಕಿನಿಂದ ಏನು ಸಾಲ ತೆಗೆದುಕೊಂಡಿದ್ದಾರೆ ಅಥವಾ ಸಾಲ ತೆಗೆದುಕೊಂಡು ತೀರಿಸಿದ್ದಾರೆ ಅವರಿಗೆ ಇದು ಅಪ್ಲೈ ಆಗುವುದಿಲ್ಲವೆಂದು ಹಿಂದೆ ಈ ಸದನದಲ್ಲಿ ವಿಚಾರ ಪ್ರಸ್ತಾಪಕ್ಕೆ ಬಂದಾಗ ಹೇಳಿದ್ದೇವೆ. ಕೆಲವರು ಪಿ.ಎಲ್.ಡಿ.ಯಿಂದ ಸಾಲ ಮಾಡಿ ಮತ್ತೆ ಕೆಲವರು ಅಲ್ಲಿ ಇಲ್ಲಿ ಸಾಲ ತಂದು ತೀರಿಸಿದ್ದಾರೆ. ಆದ್ದರಿಂದ ಅದನ್ನು ವಜಾ ಮಾಡುವ ಪ್ರಶ್ನೆ ಈಗ ಬರುವುದಿಲ್ಲ. ಅವರು ಹೇಳಿರುವುದೇನೆಂದರೆ ಸರ್ಕಾರಕ್ಕೆ ಏನು ಪ್ರೀಮಿಯಂ ಬರಬೇಕು ಅದನ್ನು ೧೦ ಎಕರೆಯೊಳಗೆ ಇರುವವರಿಗೆ ವಜಾ ಮಾಡುತ್ತೇವೆಂದು ಹೇಳಿದ್ದೇವೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಏನು ಸಾಲ ಮಾಡಿದ್ದಾರೆ ಅದನ್ನು ವಜಾ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಸರ್ಕಾರ ಹೇಳಿರಲೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಯಾವ ಉದ್ದೇಶ ಇಟ್ಟುಕೊಂಡು ಬಡ ಗೇಣೀದಾರರಿಗೆ ಅನುಕೂಲವಾಗಬೇಕೆಂದು ಪ್ರಯತ್ನ ಮಾಡಿದಿರಿ ಆ ಗೇಣಿದಾರರು ರಾಜ್ಯದಲ್ಲಿ ೯ ಕೋಟಿ ರೂಪಾಯಿಗಳನ್ನು ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಕಂತು ಕಟ್ಟುತ್ತಿದ್ದಾರೆ. ಈ ಆಜ್ಞೆ ಮಾಡಿದ ಮೇಲೆ ಎಷ್ಟು ಜನ ಗೇಣೀದಾರರಿಗೆ ಹಣ ಉಳಿಯಿತು. ಇದನ್ನು ಮಾಡಿದ್ದರಿಂದ ನಿಜವಾಗಿ ಬಡವರಿಗೆ ಅನುಕೂಲವಾಗಿಲ್ಲ. ಯಾರು ಸಾಲ ಪಡೆಯದೆ ಆರಾಮವಾಗಿದ್ದಾರೆ ಅವರಿಗೆ ಅನುಕೂಲವಾಯಿತೇ ಹೊರತು ನಿಜವಾದ ಗೇಣೀದಾರರಿಗೆ ಆಗಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ನೀವು ಹೇಳುವುದು ವೈಸಾವರ್ಸ ಆಗುತ್ತದೆ. ಯಾರು ಸಾಲ ಮಾಡಿ ಅದನ್ನು ತೀರಿಸಿದ್ದಾರೆ ಅವರಿಗೆ ಅನುಕೂಲವಾಗಲಿಲ್ಲ ಯಾರು ಒಂದೆರಡು ಇನ್‌ಸ್ಟಾಲ್‌ಮೆಂಟ್ ಇಟ್ಟುಕೊಂಡಿದ್ದಾರೆ ಅವರಿಗೆ ಅನುಕೂಲವಾಯಿತು......

ಶ್ರೀ ಬಿ.ಎಸ್. ಯಡಿಯೂರಪ್ಪ.—ಪಿ.ಎಲ್.ಡಿ. ಬ್ಯಾಂಕಿನಲ್ಲಿ ಸಾಲ ಮಾಡಿರುವ ನಾನು ಒಬ್ಬ ಗೇಣೀದಾರ. ನನಗೆ ಹತ್ತು ಎಕರೆ ಜಮೀನಿದೆ ನಾನು ಪಿ.ಎಲ್.ಡಿ ಬ್ಯಾಂಕಿಗೆ ಅರ್ಜಿ ಹಾಕಿ ೪–೫ ಸಾವಿರ ರೂಪಾಯಿ ಸರ್ಕಾರಕ್ಕೆ ಕಟ್ಟಬೇಕಾದುದನ್ನು ತೆಗೆದುಕೊಂಡು ಕಟ್ಟಿದೆ ಅಂಥದ್ದು ಇಡೀ ರಾಜ್ಯದಲ್ಲಿ ೯ ಕೋಟಿ ರೂಪಾಯಿಗಳ ಸಾಲ ಇತ್ತು. ನಾನು ಈಗ ಜಮೀನನ್ನು ಉಳಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ.

ಶ್ರೀ ಆರ್.ಎಲ್. ಜಾಲಪ್ಪ.—ಯಾರನ್ನೂ ಸಾಲ ತೆಗೆದುಕೊಳ್ಳಿ ಎಂದು ನಾವು ಫೋರ್ಸ್ ಮಾಡಲಿಲ್ಲ. ಅವರಾಗಿಯೇ ಬಂದು ಪಿ.ಎಲ್.ಡಿ. ಬ್ಯಾಂಕಿನಲ್ಲಿ ಸಾಲ ಮಾಡಿ ತೀರಿಸಿದ್ದಾರೆ. ಫೋರ್ಸ್ ಮಾಡಿದ್ದರೆ ಸೆಂಟ್ ಪರ್‌ಸೆಂಟ್ ಕ್ಲಿಯರ್ ಆಗಬೇಕಾಗಿತ್ತು.

ಶ್ರೀ ಆರ್. ವೆಂಕಟರಾಮಯ್ಯ.—ಕೆಲವರು ಬಡವರು ಅಲ್ಪಸ್ವಲ್ಪ ಕಟ್ಟಿದ್ದಾರೆ ಕೆಲವರು ಪೂರ್ತಿ ಕಟ್ಟಿದ್ದಾರೆ. ಒಟ್ಟು ರಾಜ್ಯದ ಸಾಲ ೮ ಕೋಟಿ ರೂಪಾಯಿಗಳು ಆಗುತ್ತದೆ. ಅದನ್ನು ತಾವು ಯೋಚನೆ ಮಾಡಿ ಮೊದಲಿನಿಂದಲೂ ಎಜಿಟೇಟ್ ಮಾಡುತ್ತಿದ್ದೀರಿ. ಈಗಲಾದರೂ ಕನ್‌ಸೆಷನ್ ಕೊಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಅವರು ಉತ್ತರಿಸುವ ಪರಿಸ್ಥಿತಿಯಲ್ಲಿ ಇಲ್ಲ. There are two categories pertaining to this subject.

SRI. R. L. JALAPPA.—I just wanted to bring to your kind notice that the Government had not promised to write off everybody's premium.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರಕ್ಕೆ ಏನು ಸಾಲ ಇತ್ತು ಅವರದ್ದು ಮಾತ್ರ ವಜಾ ಮಾಡುತ್ತೇವೆಂದು ಹೇಳಿದಿರೇ ಹೊರತು, ಸರ್ಕಾರಕ್ಕೆ ಯಾರಿಂದ ಸಾಲ ಇರಲಿಲ್ಲ, ಕ್ಲಿಯರ್ ಆಗಿತ್ತು ಅವರ ಬಗ್ಗೆ ಏನೂ ಹೇಳಲಿಲ್ಲ. ಮಾನ್ಯ ಸಭಾಧ್ಯಕ್ಷರೆ, ಪಿ.ಎಲ್.ಡಿ. ಬ್ಯಾಂಕಿಗೆ ಯಾವ ಗೇಣೀದಾರರು ಕಂತು ಕಟ್ಟಬೇಕು ಎಂಬ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಅದು ಒಂದು ಕ್ಯಾಟಗರಿ, ಕೆಲವರು ಕಂತಿನ ಹಣ ಕಟ್ಟೇ ಇಲ್ಲ. ನಿಮ್ಮ ಹೇಳಿಕೆ ಪ್ರಕಾರ ಕೊಡಬೇಕಾಗಿಲ್ಲ. ನಾನು ಹೇಳತಕ್ಕದ್ದು ಯಾರು ಯಾರು ಹಣ ಕಟ್ಟಿಲ್ಲ ಆ ಗೇಣೀದಾರರಿಗೆ ಪಿ.ಎಲ್.ಡಿ. ಬ್ಯಾಂಕಿನಿಂದ ಹಣ ಕಟ್ಟಲೇಬೇಕು, ಇಲ್ಲದಿದ್ದರೆ ನಿಮ್ಮ ಜಮೀನು ಹರಾಜು ಹಾಕುತ್ತೇವೆ ಎಂದು ನೋಟೀಸ್ ಹೋಗಿದೆ. ಅವರು ನಮಗೆ ಇನ್ನೂ ಸರ್ಕಾರಿ ಆಜ್ಞೆ ಬಂದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ಪಿ.ಎಲ್.ಡಿ. ಬ್ಯಾಂಕ್ ಲೋನ್ಸ್ ಬಗ್ಗೆ ನೀವು ಹೇಳುತ್ತಿದ್ದೀರೋ ಹೇಗೆ? ಗೇಣೀದಾರರು ಸರ್ಕಾರಕ್ಕೆ ಏನು ಕಟ್ಟಬೇಕಾಗಿತ್ತೋ ಅದನ್ನು ಬಿಟ್ಟಿದ್ದೇವೆ. ಹತ್ತು ಎಕರೆಗಿಂತ ಕಡಿಮೆ ಜಮೀನು ಇರುವವರು ಸರ್ಕಾರಕ್ಕೆ ಏನು ಬಾಕಿ ಕೊಡಬೇಕಾಗಿತ್ತೋ ಅಂಥವರಿಗೆ ವಜಾ ಮಾಡಿದ್ದೇವೆ. ಹಣ ಬಾಕಿ ತೀರಿಸುವವರಿಗೆ ವಜಾ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಪಿ.ಎಲ್.ಡಿ. ಬ್ಯಾಂಕಿಗೆ ಕಟ್ಟಬೇಕಾದ ಬಾಕಿ ಬಗ್ಗೆ ಹೇಳಿಲ್ಲ. ಸರ್ಕಾರಕ್ಕೆ ಏನು ಪ್ರೀಮಿಯಂ ಕಟ್ಟಬೇಕಾಗಿತ್ತೋ ಅದರ ಬಗ್ಗೆ ಹೇಳಿದ್ದೇವೆ, ಪಿ.ಎಲ್.ಡಿ. ಬ್ಯಾಂಕ್ ಸುದ್ದಿ ಇಲ್ಲ. ಹತ್ತು ಎಕರೆ ಒಳಗಡೆ ಇರತಕ್ಕವರಿಗೆ ಸರ್ಕಾರಕ್ಕೆ ಬರಬೇಕಾದ ಹಣವನ್ನು ಕಟ್ಟದಂತೆ ವಜಾ ಮಾಡಿದ್ದೇವೆ. ಪಿ.ಎಲ್.ಡಿ.ಗೆ. ಸಾಲ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಸರ್ಕಾರಕ್ಕೆ ನೇರವಾಗಿ ಕಟ್ಟಿರುವವರ ವಿಚಾರ ಸರಿ. ಆದರೆ ಯಾರು ನೇರವಾಗಿ ಕಟ್ಟಿಲ್ಲ ಅವರ ಬಗ್ಗೆ ಹೇಳಬೇಕಾಗುತ್ತದೆ. ನೇರವಾಗಿ ಸರ್ಕಾರಕ್ಕೆ ಕಟ್ಟಿರಲಿ, ಪಿ.ಎಲ್.ಡಿ.ಬಿ. ಮುಖಾಂತರ ಕಟ್ಟಿರಲಿ ಬಾಕಿ ವಜಾ ಮಾಡುತ್ತೇವೆ ಎಂದು ಹೇಳತಕ್ಕ ಮಾತು ಬರಬೇಕು. ಹಣ ಹಿಂದಕ್ಕೆ ಕೊಡಿ ಎಂಬುದು ಮಾನ್ಯ ವೆಂಕಟರಾಮಯ್ಯನವರ ಅಭಿಪ್ರಾಯ, ಅದು ಬೇರೆ ಯಾರು ಗೇಣೀದಾರರು ಸರ್ಕಾರಕ್ಕೆ ನೇರವಾಗಿ ಕಟ್ಟಿಲ್ಲ ಅವರು ಕೊಡಬೇಕಾಗಿಲ್ಲ ಎಂದು ಹೇಳಿಕೆ ಕೊಟ್ಟಿರಿ.

ಶ್ರೀ ಆರ್.ಎಲ್. ಜಾಲಪ್ಪ.—ಹಾಗಲ್ಲ ಅದು ಕವರ್ ಆಗಿಲ್ಲ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. They were not due to the Government on that day. The tenants were due to the Primary Land Development Banks and not to the Government. We have written off the premia that were due to the Government.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರಕ್ಕೆ ಯಾರು ಕಟ್ಟಿದರು ?

ಶ್ರೀ ಆರ್. ಎಲ್. ಜಾಲಪ್ಪ.—ಅಂದರೆ ?

ಶ್ರೀ ಎಸ್. ಬಂಗಾರಪ್ಪ.—ಗೇಣೀದಾರರೇ ನೇರವಾಗಿ ಸರ್ಕಾರಕ್ಕೆ ಕಟ್ಟಿದ್ದಲ್ಲವೆ ?

ಶ್ರೀ ಆರ್. ಎಲ್. ಜಾಲಪ್ಪ.—ನೇರವಾಗಿ ಅಂದರೆ ಪಿ.ಎಲ್.ಡಿ. ಬ್ಯಾಂಕಿನಿಂದಲೋ ಏನೋ ತಂದಿದ್ದಾರೆ. ಅದಕ್ಕೆ ಗೌರ್ನಮೆಂಟ್ ಆರ್ಡರ್ ಅಪ್ಲೈ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಜಿ.ಓ. ಸರಿ ಮಾಡಿ ಎಂದು ಅದಕ್ಕೆ ಹೇಳಿದ್ದುದು. ನಾನು ಅದನ್ನು ಓದಿ ನೋಡಿದ್ದೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ ಈ ಪ್ರೀಮಿಯಂಗೆ ಅನ್ವಯವಾಗುವುದಿಲ್ಲ ಎಂದು ಈಗ ಸಹ ಕಲೆಕ್ಟ್ ಮಾಡುತ್ತಿದ್ದಾರೆ. ಅಲ್ಲಿಂದ ಬೇಕಾದರೆ ವರದಿ ತರಿಸಿ.

ಶ್ರೀ ಆರ್. ಎಲ್. ಜಾಲಪ್ಪ.—ಸರ್ಕಾರದಿಂದ ಕಲೆಕ್ಟ್ ಮಾಡುತ್ತಿದ್ದಾರೋ, ಪಿ.ಎಲ್.ಡಿ. ಬ್ಯಾಂಕಿನಿಂದ ಮಾಡುತ್ತಿದ್ದಾರೋ ?

ಶ್ರೀ ಪಟಮಕ್ಕಿ ರತ್ನಾಕರ್.—೧೦ ಎಕರೆಗಿಂತ ಕಡಿಮೆ ಇರುವ ಡಿ ಕ್ಲಾಸ್ ಲ್ಯಾಂಡಿಗೆ ಬರುತ್ತಾರೆ. ೧೦ ಮತ್ತು ಬಾಗಾಯಿತು ಬಗ್ಗೆ ಕರೆಕ್ಟಾಗಿ ನೋಟಿಫಿಕೇಷನ್ ಮಾಡಿಲ್ಲ. ಕನ್‌ವರ್ಷನ್ ಬಗ್ಗೆಯೂ ಮಾಡಿಲ್ಲ. ಸ್ಪೆಷಲ್ ತಹಸೀಲ್ದಾರ್ ಅವರು ಹೇಳುತ್ತಿದ್ದರು ೧೦ ಎಕರೆ ಡಿ-ಕ್ಲಾಸ್ ಲ್ಯಾಂಡಿಗೆ ಸಂಬಂಧಪಟ್ಟಂತೆ ಆಜ್ಞೆ ಸರ್ಕಾರದಿಂದ ಬಂದಿದೆ, ಆ ಪ್ರಕಾರ ಮಾಡುತ್ತಿದ್ದೇವೆ, ಆದರೆ ಇದನ್ನು ಕಲೆಕ್ಟ್ ಮಾಡಬೇಕು ಎಂದು ಪಿ.ಎಲ್.ಡಿ. ಬ್ಯಾಂಕ್ ಆರಿಯರ್ಸ್ ಕಲೆಕ್ಟ್ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಈ ಬಗ್ಗೆ ಸರ್ಕಾರಿ ಆಜ್ಞೆಯನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಮಾನ್ಯ ಜಾಲಪ್ಪನವರು ಅದನ್ನು ಮಾಡದಿದ್ದರೆ ಮಾತ್ರ ಗೇಣೀದಾರರಿಗೆ ಏನೂ ಸಹಾಯ ಮಾಡಿದಂತಾಗುವುದಿಲ್ಲ. ಪಿ.ಎಲ್.ಡಿ. ಬ್ಯಾಂಕ್‌ಗೆ ಅವರು ಹಣ ಕಟ್ಟುತ್ತಾರೆ, ಈಗ ಹಣ ಕೊಡದಿದ್ದರೆ ವಸೂಲು ಮಾಡುತ್ತೇವೆಂದರೆ ಅರ್ಥ ಏನು ? ನೀವು ಪಿ.ಎಲ್.ಡಿ. ಬ್ಯಾಂಕ್‌ಗೆ ಸಹಾಯ ಮಾಡುತ್ತಿದ್ದೀರೋ ಅಥವಾ ಗೇಣೀದಾರರಿಗೆ ಸಹಾಯ ಮಾಡುತ್ತಿದ್ದೀರೋ ? ಮೊದಲು ಗೇಣೀದಾರರಿಗೆ ಸಹಾಯ ಮಾಡುವ ಸರ್ಕಾರಿ ಆಜ್ಞೆಯನ್ನು ಮಾಡಬೇಕು. ಈ ಎರಡೂ ಕ್ಯಾಟಗರಿ ಜನರಿಗೆ ತಾವು ಕವರ್ ಮಾಡಬೇಕು. ನೇರವಾಗಿ ಸರ್ಕಾರಕ್ಕೆ ಕಟ್ಟಿರಲಿ ಪಿ.ಎಲ್.ಡಿ. ಬ್ಯಾಂಕ್ ಮುಖಾಂತರ ಕಟ್ಟಿರಲಿ ದಯಮಾಡಿ ಸರ್ಕಾರಿ ಆಜ್ಞೆಯನ್ನು ತಿದ್ದುಪಡಿ ಮಾಡಿ. ತುರ್ತಾಗಿ ಎರಡು ಕ್ಯಾಟಗರಿಯವರಿಗೆ ಕವರ್ ಮಾಡಬೇಕು. ಆಯಿತು. ಅದನ್ನು ನೀವು ಮಾಡಿ. ಎಲ್ಲಿಯವರೆಗೆ ನೀವು ಜನರನ್ನು ನಂಬಿಸಿದ್ದೀರಿ ಎಂದರೆ, ಕೊಡತಕ್ಕಂಥ ಕಂದಾಯವನ್ನು ಮಾಫಿ ಮಾಡುತ್ತೇವೆಂದು ಹೇಳಿದಿರಿ. ಆ ರೀತಿ ಹೇಳಿ ಓಟನ್ನು ತೆಗೆದುಕೊಂಡಿರಿ. ದಕ್ಷಿಣ ಕನ್ನಡ ಜಿಲ್ಲೆ, ಕಾರವಾರ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆ ಇಲ್ಲೆಲ್ಲಾ ಗೇಣೀದಾರರು ಹೆಚ್ಚು ಇದ್ದಾರೆ. ಇಲ್ಲೇ ನೀವು ಹೆಚ್ಚು ಕಾನ್ಸಂಟ್ರೇಟ್ ಮಾಡಿ ಅಲ್ಲಿ ವ್ಯಾಪಕವಾಗಿ ಜನತಾ ಪಕ್ಷದವರು ಪ್ರಚಾರ ಮಾಡಿದರು. ಇವೆಲ್ಲಾ ಏನು ಓಟು ತೆಗೆದುಕೊಳ್ಳುವುದಕ್ಕಾಗಿ ಹೇಳಿದಿರಿ. ನಿಮ್ಮ ಪ್ರಕಾರ ನೋಡುವುದಾದರೆ ಇಂದು ಆ ಗೇಣೀದಾರರು ಮಣ್ಣು ತಿನ್ನಬೇಕಾಗುತ್ತದೆ, ದೊಡ್ಡ ದೊಡ್ಡ ಭಾಷಣ ಮಾಡಿದಿರಿ, ಅದು ಪತ್ರಿಕೆಯಲ್ಲೂ ದೊಡ್ಡದಾಗಿ ಬಂತು.

ಶ್ರೀ ಆರ್. ಎಲ್. ಜಾಲಪ್ಪ.—ನಾವು ಏನು ಭಾಷಣ ಮಾಡಿದ್ದೇವೆಯೋ ಅದರಂತೆ ನಡೆದುಕೊಂಡಿದ್ದೇವೆ. ಪಿ.ಎಲ್.ಡಿ.ಬಿ. ಬ್ಯಾಂಕಿನಿಂದ ತೆಗೆದುಕೊಂಡಿರತಕ್ಕಂತಹ ಸಾಲವನ್ನು ವಸೂಲು ಮಾಡುವುದಿಲ್ಲವೆಂದು ಹೇಳಿರಲೇ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ರೀತಿ ಹೇಳಿದ್ದರಿಂದಲೇ ನಿಮಗೆ ಓಟು ಬಂತು.

ಶ್ರೀ ಎಸ್. ಬಂಗಾರಪ್ಪ.—ಪಿ.ಎಲ್.ಡಿ. ಬ್ಯಾಂಕಿನ ವಿಚಾರದಲ್ಲಿ ಈ ಸದನದಲ್ಲೇ ಹೇಳಿದ್ದೀರಿ. ಅದನ್ನು ನಾವು ಸ್ಪಷ್ಟವಾಗಿ ಕೇಳಿದ್ದೇವೆ. ಸರ್ಕಾರ ಆ ಬಗ್ಗೆ ಆಜ್ಞೆ ಮಾಡುತ್ತದೆ ಎಂಬುದಾಗಿ ತಾವು ಪ್ರಸ್ತಾಪ ಮಾಡಿದ್ದೀರಿ. ೪ ಲಕ್ಷದ ೫೫ ಸಾವಿರ ಚಿಲ್ಲರೆ ಗೇಣೀದಾರರು ಏನು ಇದ್ದಾರೆ, ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡಿರುವವರಿಗೂ ಸಹಾಯವನ್ನು ಮಾಡಿದರೂ ೫೦ ಪರ್ಸೆಂಟ್‌ವರೆಗೆ ಕವರ್ ಆಗುತ್ತದೆ. ಆದರೆ ನೀವು ಮಾಡಿರತಕ್ಕ ಆಜ್ಞೆ ಚುನಾವಣೆಗಾಗಿಯೇ ಮಾಡಿದ್ದೀರಿ. ಅದನ್ನು ಉಪಯೋಗಿಸಿಕೊಂಡು ಮುಗಿಸಿದ್ದೀರಿ. ಈಗಲಾದರೂ ಆ ಬಗ್ಗೆ ತಿದ್ದುಪಡಿ ಮಾಡಿ ಮತ್ತೊಂದು ಆಜ್ಞೆ ಹೊರಡಿಸಿ.

ಶ್ರೀ ಆರ್. ಎಲ್. ಜಾಲಪ್ಪ.—ನಾವಾದರೂ ೫೦ ಪರ್ಸೆಂಟ್‌ನ್ನು ಕವರ್ ಮಾಡಿದ್ದೇವೆ. ನಿಮ್ಮ ಕೈಯಲ್ಲೇ ಅಧಿಕಾರ ಇದ್ದಾಗ ನೀವು ಅಷ್ಟನ್ನಾದರೂ ಮಾಡಲಿಲ್ಲವಲ್ಲ !

ಶ್ರೀ ಎಸ್. ಬಂಗಾರಪ್ಪ.—೫೦ ಪರ್ಸೆಂಟ್ ಕವರ್ ಮಾಡಿದ್ದೀರಿ ಎಂದು ಹೇಳಿಲ್ಲ. ನಮ್ಮ ಹತ್ತಿರವೂ ಅಂಕಿ ಅಂಶಗಳು ಇವೆ. ಕಂದಾಯ ಮಂತ್ರಿಗಳಾಗಿ ಶ್ರೀ ಹುಸೇನ್ ಮಿರ್ಗೆಯವರು ಇದ್ದರೂ ನಾನು ಇದ್ದೆ. ಲೆಕ್ಕ ಮಾಡಿದ್ದೇವೆ. ಈ ರೀತಿಯ ವ್ಯವಹಾರದಿಂದ ಜನಗಳಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ನಿಮ್ಮ ಹಾಗೂ ಶ್ರೀ ರಾಮಕೃಷ್ಣ ಹೆಗಡೆಯವರ ಮಾತನ್ನು ಕೇಳಿ ಜನರ ಆಸ್ತಿ ಹರಾಜಿಗೆ ಬಂದಿದೆ. ಇದೇ ಸಂದರ್ಭದಲ್ಲಿ ಜಾಲಪ್ಪನವರು ಇಲ್ಲಿರುವುದರಿಂದ ಮತ್ತೊಂದು ಮಾತನ್ನು ಹೇಳಬೇಕಾಗಿದೆ. ಬರಗಾಲ ಬರಗಾಲ ಎಂದು ದೇಶದಲ್ಲೆಲ್ಲಾ ದೊಡ್ಡ ಕೂಗನ್ನೇ ಎಬ್ಬಿಸಿ ಹಣವನ್ನು ತೆಗೆದುಕೊಂಡಿದ್ದೀರಿ. ಬರಗಾಲ ಪ್ರದೇಶದಲ್ಲಿ ಕಂದಾಯವನ್ನು ವಸೂಲು ಮಾಡುವುದಿಲ್ಲವೆಂದು ಸರ್ಕಾರದವರು ಹೇಳಿಕೆ ಕೊಟ್ಟಿದ್ದರು. ಪ್ರಾಥಮಿಕ ಸೇವಾ ಸಹಕಾರಿ ಸಂಘಗಳಿಂದ ತೆಗೆದುಕೊಂಡಿದ್ದಂತಹ ಸಾಲವನ್ನೂ ವಸೂಲು ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಇಲ್ಲಿ ಮಾತು ಕೊಟ್ಟಿದ್ದೀರಿ. ನನ್ನ ತಾಲ್ಲೂಕಿನಲ್ಲೇ ಎಲ್ಲಾ ಕಡೆ ನೋಟೀಸ್ ಹಂಚಿದ್ದಾರೆ. ಚಾವಡಿ ಮೇಲೆ

ನೋಟೀಸ್‌ನ್ನು ಹಂಚಿದ್ದಾರೆ. ಸಹಕಾರಿ ಸಂಘಗಳಲ್ಲಿ ತೆಗೆದುಕೊಂಡಿರತಕ್ಕ ಸಾಲವನ್ನು ವಾಪಸ್ಸು ಕೊಡದಿದ್ದರೆ ನಿಮ್ಮ ಆಸ್ತಿಯನ್ನು ಹರಾಜು ಮಾಡಲಾಗುವುದು ಎಂದು ಹೇಳಿದ್ದಾರೆ. ಇದೇ ರೀತಿ ರಾಜ್ಯದ ೧೯ ಜಿಲ್ಲೆಗಳಲ್ಲೂ ಆಗಿದೆ. ಎಲ್ಲಾ ಕಡೆ ಟಾಂ ಟಾಂ ಮಾಡಿ ನೋಟೀಸ್ ಕೊಟ್ಟಿದ್ದಾರೆ. ಬರಗಾಲ ಇದ್ದಂತಹ ಪ್ರದೇಶದಲ್ಲಿ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ. ಅವರು ಯಾರೂ ಊರಲ್ಲೇ ಇಲ್ಲಿ. ನೋಟೀಸನ್ನು ಪರ್ಸನಲ್ಲಾಗಿ ಸರ್ವ್ ಮಾಡುವುದಕ್ಕೂ ಜನವೇ ಇಲ್ಲ. ಧಾರವಾಡ ಜಿಲ್ಲೆ ನರಗುಂದ ಹಾಗೂ ನವಲಗುಂದದಲ್ಲಿ, ಮಾಡಿದ್ದೀರಿ. ಬಿಜಾಪುರ ಜಿಲ್ಲೆಯಲ್ಲಿ ಮಾಡಿರತಕ್ಕಂತಹ ಬಗ್ಗೆ ನಮ್ಮಲ್ಲಿ ದಾಖಲೆಗಳು ಇವೆ. ಕರ್ನಾಟಕ ರಾಜ್ಯದ ೧೯ ಜಿಲ್ಲೆಗಳ ೧೭ ಜಿಲ್ಲೆಗಳಲ್ಲಿ ಬರಗಾಲ ಎಂಬುದಾಗಿ ದೊಡ್ಡದಾಗಿ ಕೂಗು ಹಾಕಿದಿರಿ. ಕೊನೆಗೆ ನೀವು ಆ ಜನಕ್ಕೆ ಕೊಟ್ಟಿರತಕ್ಕ ಸಹಾಯ ಏನು ? ಬರಗಾಲ ಪ್ರದೇಶದಲ್ಲಿ ಸಹಕಾರಿ ಸಂಘಗಳಲ್ಲಿ ತೆಗೆದುಕೊಂಡಿರತಕ್ಕ ಸಾಲವನ್ನು ವಸೂಲು ಮಾಡುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು. ನಮ್ಮ ತಾಲ್ಲೂಕಿನ ಹೊಸ ಕಸ್ಬಗಿ ಹಾಗೂ ಹಿಂದುವಳ್ಳಿಯಲ್ಲಿ ಈ ರೀತಿಯಾಗಿ ನೋಟೀಸ್ ಕೊಟ್ಟಿರುವುದರ ಬಗ್ಗೆ ವರದಿಯನ್ನು ತರಿಸಿದ್ದೇನೆ. ಇದರ ಬಗ್ಗೆ ನಾನೇ ತಮಗೆ ದೂರವಾಣಿ ಮಾಡಿದೆ. ಆದರೂ ಎಷ್ಟು ಸಾರಿ ದೂರವಾಣಿ ಮಾಡುವುದಕ್ಕಾಗುತ್ತದೆ ? ಒಂದು ಸಾರಿ ಸಿಕ್ಕಿದರೆ ಮತ್ತೊಂದು ಸಾರಿ ಸಿಕ್ಕುವುದಿಲ್ಲ. ಸಾಲವನ್ನು ವಸೂಲು ಮಾಡುವುದಿಲ್ಲವೆಂದು ಜನತೆಗೆ ಏನು ಭರವಸೆ ಕೊಟ್ಟಿದ್ದೀರಿ, ಅದರಂತೆ ತಕ್ಷಣವೇ ಕ್ರಮ ಕೈಗೊಳ್ಳಿ. ಆ ರೀತಿ ನೀವು ಮಾಡದಿದ್ದರೆ ಜನರ ಆಸ್ತಿ ಉಳಿಯುವುದಿಲ್ಲ. ಕೇಂದ್ರದಿಂದ ತಂದಂತಹ ಹಣ ಎಲ್ಲಿ ಹೋಯಿತು ? ಸಹಕಾರಿ ಸಂಘದಿಂದ ತೆಗೆದುಕೊಂಡಿರತಕ್ಕ ಸಾಲವನ್ನು ವಸೂಲು ಮಾಡುವುದಕ್ಕೆ ಬಹಳ ದೊಡ್ಡ ಯೋಜನೆಯನ್ನು ಹಾಕಿಕೊಂಡಿದ್ದೀರಿ. ನೀವು ಅಪೆಕ್ಸ್ ಬ್ಯಾಂಕಿನಿಂದ ಹಣ ತಂದಿದ್ದೀರಿ. ತೊಂದರೆ ಇದೆ ಎಂಬುದು ನನಗೂ ಗೊತ್ತಿದೆ. ನಿಮ್ಮ ತೊಂದರೆ ಏನು ಎಂದು ನಮಗೆ ಗೊತ್ತಿದ್ದರೂ ಕೂಡಾ ಆ ಜನರ ದೃಷ್ಟಿಯಿಂದ ಆ ಜನರಿಗೆ ಸಹಾಯ ಕೊಡದೇ ಇದ್ದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಅವರಿಗೆ ಲಾಂಗ್ ಟರ್ಮ್ ಲೋನ್ ಎಂದು ಮಾಡಿ, ಬಡ್ಡಿಯನ್ನು ಮಾಫಿ ಮಾಡಿ ಎಂದು ಹೇಳುತ್ತೇನೆ. ಹಿಂದೆ ಶ್ರೀಮಾನ್ ಅಂತುಳೆಯವರು ಮೊದಲು ಮುಖ್ಯ ಮಂತ್ರಿಗಳು ಆದಾಗ ಎಂದು ಕಾಣುತ್ತದೆ. ಅವರು ಇಂಥ ಒಂದು ತೀರ್ಮಾನ ಮಾಡಿದರು. ಸಹಕಾರಿ ಸಂಘಗಳಿಂದ ಪಡೆದುಕೊಂಡ ಸಾಲವನ್ನು ಯಾರು ಕಟ್ಟಿಲ್ಲ ಅದನ್ನು ಮಜಾ ಮಾಡುತ್ತೇವೆಂದು ಹೇಳಿದರು. ಆಗ ಆ ಬಗ್ಗೆ ಬ್ಯಾಂಕಿನವರು ಒಪ್ಪಲಿಲ್ಲ.

೪–೩೦ ಪಿ. ಎಂ.

ಶ್ರಮಪಟ್ಟು ಕೊಟ್ಟವರು ಯಾರೂ ಒಬ್ಬರೂ ಒಪ್ಪಲಿಲ್ಲ. ಅನಂತರ ರಿಸರ್ವ್ ಬ್ಯಾಂಕೂ ಸಹಾ ಒಪ್ಪುವುದಿಲ್ಲವೆಂದು ಹೇಳಿತು. ಈಗ ಈ ಸಾಲವನ್ನು ಒಂದೇ ಸಾರಿ ತೊಳೆದುಹಾಕಿದರೆ ಒಳ್ಳೆಯದು. ಕೊನೆಯ ಪಕ್ಷ ಬಡ್ಡಿಯನ್ನಾದರೂ ಮಜಾ ಮಾಡಿ. ಮುಂದೆ ಅಸಲನ್ನು ಅವರು ಕಟ್ಟುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಕಳೆದ ವರ್ಷ, ಹಿಂದಿನ ವರ್ಷ ಬರಗಾಲ ಇತ್ತು. ಕಳೆದ ೪ ವರ್ಷಗಳಿಂದ ಬರಗಾಲ ಇದೆ. ಈ ವರ್ಷ ಕೂಡಾ ಅನೇಕ ಭಾಗಗಳಲ್ಲಿ ಬರಗಾಲ ಇದೆ ಎಂದು ಹೇಳಿಕೆಗಳು ಕೂಡಾ ಬಂದಿವೆ. ಮಲೆನಾಡು ಪ್ರದೇಶದ ತೋಟದವರ ಪರಿಸ್ಥಿತಿಯಂತೂ ಬಹಳ ಕಷ್ಟ ಇದೆ. ಶೃಂಗೇರಿ, ಕೊಪ್ಪ, ಕಡೆ ನಾನು ಕಾರಿನಲ್ಲಿ ಹೋಗುವಾಗ ನೋಡಿದ್ದೇನೆ. ಅಲ್ಲಿ ನಾಟಿ ಮಾಡಿರತಕ್ಕ ಬೆಳೆ ಒಣಗಿ ಬಿರಿಬಂದಿದ್ದು ನೋಡಲು ಆಗದಂತೆ ಆಗಿದೆ. ಕಾಫೀ ತೋಟಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ಹೇಳಲು ಸಾಧ್ಯವಿಲ್ಲ. ಅಲ್ಲಿ ಲ್ಯಾಟರೈಟ್ ಸಾಯಿಲ್ ಇದ್ದು ನೀರು ಕೆಳಕ್ಕೆ ಹೋಗುತ್ತಿದೆ. ಅಲ್ಲಿ ಜನ ಕುಡಿಯುವ ನೀರಿಗೆ ಹೇಗೆ ನಿಭಾಯಿಸುತ್ತಾರೋ ನನಗೆ ಗೊತ್ತಾಗುತ್ತಾ ಇಲ್ಲ. ಈ ಸಾಲವನ್ನು ಮುಂದಕ್ಕೆ ಹಾಕತಕ್ಕ ಬಗ್ಗೆ ಸದನದಲ್ಲಿ ಸಚಿವರು ಹೇಳಿಕೆ ಕೊಡಬೇಕು. ಇವತ್ತು ಆ ಜನರ ಪರವಾಗಿ ತಾವು ಭಾಷಣ ಮಾಡುತ್ತಿರಿ. ದಯಮಾಡಿ ಅವರಿಗೆ ಸಹಾಯ ಕೊಡುವ ಕೆಲಸವನ್ನು ಮಾಡಬೇಕೆಂದು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರಿಗೆ ಎಲ್ಲವೂ ಗೊತ್ತಿದೆ. ಹಣ ಹೇಗೆ ಬರುತ್ತದೆಂಬುದು ಅವರಿಗೆ ಗೊತ್ತಿದೆ. ಇವತ್ತು ಮಲಗಿರುವವರನ್ನು ಎಬ್ಬಿಸಬಹುದು. ಆದರೆ ಸುಮ್ಮಸುಮ್ಮನೆ ಮಲಗಿರುವವರನ್ನು ಎಬ್ಬಿಸುವುದು ಬಹಳ ಕಷ್ಟ. ಮಾನ್ಯ ಬಂಗಾರಪ್ಪನವರು ಸುಮ್ಮಸುಮ್ಮನೆ ಮಲಗಿರುವವರ ಹಾಗೆ ಇದನ್ನೆಲ್ಲಾ ಹೇಳುತ್ತಿದ್ದಾರೆ. ಶ್ರೀ ಬಂಗಾರಪ್ಪನವರು ಪ್ರಭಾವಯುತವಾದ ಕಾಂಗ್ರೆಸ್‌ನ ಧುರೀಣರು ಇದ್ದಾರೆ. ಇವತ್ತು ನಬಾರ್ಡ್ ಸಂಸ್ಥೆ ಕೇಂದ್ರ ಸರ್ಕಾರದ ಅಧೀನದಲ್ಲಿ ಇದೆ. ದಯಮಾಡಿ ಮಾನ್ಯ ಬಂಗಾರಪ್ಪನವರು ತಮ್ಮ ಪ್ರಭಾವವನ್ನು ಬೀರಿ ನಬಾರ್ಡ್‌ನವರು ಏನು ನಮಗೆ ಸಾಲ ಕೊಟ್ಟಿದ್ದಾರೆ ಅದನ್ನು ಇನ್ನು ೪–೫ ವರ್ಷ ಕೇಳದಂತೆ ಮಾಡಿದರೆ ನನಗೆ ಬಹಳ ಸಂತೋಷ ಆಗುತ್ತದೆ. ಆಗ ಇವರು ಹೇಳಿದಹಾಗೆ ನಾವು ನಡೆದುಕೊಳ್ಳಬಹುದು.

ಮೊನ್ನೆವರೆಗೆ ೪೫೦ ಕೋಟಿ ಔಟ್ ಸ್ಟ್ಯಾಂಡಿಂಗ್ ಇದ್ದು ೧೨೦ ಕೋಟಿ ರೂಪಾಯಿಗಳ ಓವರ್ ಡ್ಯೂ ಇದೆ. ಇವತ್ತು ೪-೫ ಬ್ಯಾಂಕಿನವರಿಗೆ ಕ್ರೆಡಿಟ್ ಲಿಮಿಟ್ ಇಲ್ಲ. ಶಿವಮೊಗ್ಗ, ಹಾಸನ, ಕೋಲಾರ, ಗುಲ್ಬರ್ಗಾದಲ್ಲಿ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಸಾಲ ಮನ್ನಾ ಮಾಡುತ್ತೇವೆ ಎನ್ನತಕ್ಕ ಕಾಲದಲ್ಲಿ ಇದೆಲ್ಲಾ ಗೊತ್ತಿರಲಿಲ್ಲವೇ?

ಶ್ರೀ ಆರ್. ಎಲ್. ಜಾಲಪ್ಪ.—ಸಾಲವನ್ನು ಮಜಾ ಮಾಡುತ್ತೇವೆ ಎಂದು ನಾನು ಎಂದೂ ಹೇಳಿಲ್ಲ. ಸಾಲ ಮಜಾ ಮಾಡುತ್ತೇನೆಂದು ಹೇಳಿದ್ದೇನೆಂದು ಸುಮ್ಮಸುಮ್ಮನೆ ಏಕೆ ಹೇಳುತ್ತೀರಿ? ರಿಸರ್ವ್ ಬ್ಯಾಂಕಿನವರು ಯಾವ ರೇಟ್ ಆಫ್ ಇಂಟರೆಸ್ಟ್ ಮೇಲೆ ಹಣ ಕೊಡುತ್ತಾರೋ ಅದೇ ರೇಟ್ ಆಫ್ ಇಂಟರೆಸ್ಟ್ ಮೇಲೆ ಸಾಲ ಕೊಡುತ್ತೇವೆಂದು ಪ್ರಣಾಳಿಕೆಯಲ್ಲಿ ನಾವು ಹೇಳಿದಂತೆ ನಡೆದು ಕೊಂಡಿದ್ದೇವೆ. ಈ ಸಾರಿ ಬರ ಬಂದಿದೆ. ನಾವು ಮಿಕ್ಕವರಿಗೂ ಸಾಲವನ್ನು ಕೊಡಬೇಕಲ್ಲವೇ? ನಾವು ಈಗ ಕೇವಲ ೨೫ ಪರ್ಸೆಂಟ್ ಜನರಿಗೆ ಸಾಲ ಕೊಟ್ಟಿದ್ದೇವೆ. ಮಿಕ್ಕವರಿಗೆ ಏನು ಮಾಡುವುದು? ಇವತ್ತು ಸಾಲವನ್ನು ವಾಪಸ್ ಕೊಡಲು ಯಾರು ಶಕ್ತರಾಗಿದ್ದಾರೆ ಅವರಿಗೆ ನೀವೂ ಸಹ ವಾಪಸ್ ಕೊಡುವಂತೆ ಪ್ರೇರೇಪಣೆ ಮಾಡಿ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹಣವನ್ನು ವಸೂಲಿ ಮಾಡಿಕೊಡುವುದಕ್ಕೆ ನೀವೇ ಬಂದು ನಿಲ್ಲಬೇಕೆನ್ನುವ ಅರ್ಥದಲ್ಲಿ ಹೇಳಿದ್ದೀರಿ. ನೀವು ಹಣವನ್ನು ನಬಾರ್ಡ್ ಸಂಸ್ಥೆಯಿಂದ ತರಬೇಕಾದರೆ, ವಸೂಲಿ ಮಾಡಿ ಕೊಡದಿದ್ದರೆ ಅವರು ನಿಮಗೆ ಮತ್ತೆ ಸಾಲ ಕೊಡುವುದಿಲ್ಲ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ ಯಾವ ಜನಗಳಿಗೆ ಸಾಲ ಈಟ್ಟೀಕೊಡುವುದಕ್ಕೆ ಶಕ್ತಿ ಇದೆ ಎಂಬುದನ್ನು ನೋಡಬೇಕು. ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡಿಕೊಂಡು ಬಂದಮೇಲೆ ಪತ್ರಿಕಾ ಹೇಳಿಕೆಯನ್ನು ಕೊಡುವಾಗ ಬರಗಾಲ ಇರತಕ್ಕ ಪ್ರದೇಶಗಳಲ್ಲಿ ಕಡ್ಡಾಯವಾಗಿ ಸಾಲವನ್ನು ವಸೂಲಿ ಮಾಡುವುದಿಲ್ಲ, ಬರಗಾಲ ಪ್ರದೇಶಗಳಲ್ಲಿರತಕ್ಕ ಜನರಿಗೆ ಸಹಾಯ ಸಹಕಾರ ಕೊಡುತ್ತೇವೆ ಎಂದು ತಿಳಿಸಿದ್ದರೂ, ಆ ರೀತಿ ಹೇಳಿದ ಮೇಲೂ ನೀವು ಸಾಲವನ್ನು ವಸೂಲಿ ಮಾಡಲಿಕ್ಕೆ ಹೊರಟಿದ್ದೀರಿ. ತಾವು ತತ್‌ಕ್ಷಣ ಆರ್ಡರ್ ಹೊರಡಿಸಿ, ಎಲ್ಲೆಲ್ಲಿ ಬರಗಾಲವಿದೆ ಅಂತಹ ಕಡೆಗಳಲ್ಲಿ ಸಾಲವನ್ನು ವಸೂಲಿ ಮಾಡುವುದಿಲ್ಲ ವೆಂದುಹೇಳಿ. ಮಾನ್ಯ ಕೃಷ್ಣಪ್ಪನವರ ತಾಲ್ಲೂಕು ನಾಗಮಂಗಲದಲ್ಲಿ ಇವತ್ತು ಏನಾಗಿದೆ?

ಶ್ರೀ ಆರ್. ಎಲ್. ಜಾಲಪ್ಪ.—ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ರಿಕವರಿ ಆದಷ್ಟು ಮದ್ದೂರು, ಮಳವಳ್ಳಿ ತಾಲ್ಲೂಕುಗಳಲ್ಲಿ ಆಗಿಲ್ಲ. ಬಡವರು ಕೊಟ್ಟೇ ಕೊಡುತ್ತಾರೆ, ಶಕ್ತಿವಂತರು ನಮ್ಮಂತಹವರು ನಿಮ್ಮಂತಹವರು ಕೊಡುವುದಿಲ್ಲ.

ಒಬ್ಬ ಮಾನ್ಯಸದಸ್ಯರು.—ಬಿಲ್‌ಕುಲ್ ಡಿಫಾಲ್ಟರ್ಸ್ ಬಗ್ಗೆ ನೀವು ಏನು ಹೇಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ನಾವು ಮೊದಲಿನಿಂದಲೂ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ಬಂದಿದ್ದೇವೆ, ಅದರ ಬಗ್ಗೆ ಬದಲಾವಣೆಯಾಗುತ್ತಾ ಇಲ್ಲ. ನಾಗಮಂಗಲ ತಾಲ್ಲೂಕಿನಲ್ಲಿ ನಿಜವಾಗಿಯೂ ಕೊಟ್ಟಿದ್ದಾರೆಂದರೆ ಶಕ್ತಿವಂತರು ಇದ್ದು ಬಾವಿ ಇದ್ದು ಬೆಳೆ ತೆಗೆದು ಸಾಲ ಕೊಡುವುದಕ್ಕೆ ಶಕ್ತಿ ಇದ್ದರೆ ವಸೂಲಿ ಮಾಡಿಕೊಳ್ಳಿ. ನಾಗಮಂಗಲ ತಾಲ್ಲೂಕಿನಲ್ಲಿ ವಸೂಲಿಯಾಗಿದೆ ಎಂದರೆ ಗಧಾಪ್ರಹಾರ ಸಾಕಷ್ಟು ನಡೆದಿದೆ ಎಂದು ಇದರ ಅರ್ಥ

ಶ್ರೀ ಆರ್. ಎಲ್. ಜಾಲಪ್ಪ.—ತಮ್ಮ ಹತ್ತಿರ ಆ ರೀತಿ ಯಾರೂ ಕಂಪ್ಲೈಂಟ್ ಹೇಳಿಲ್ಲ. ಹಾಗಾದರೆ ಗಧಾಪ್ರಹಾರ ಮಾಡಿಲ್ಲ ವೆಂದಲ್ಲವೇ?

ಶ್ರೀ ಎಸ್. ಬಂಗಾರಪ್ಪ.—ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ ತಾವು ಇದನ್ನು ಸರಿಪಡಿಸಬೇಕು. ೮-೧೦ ಎಕರೆ ತರಿ ಭೂಮಿಯನ್ನು ಇಟ್ಟುಕೊಂಡಿರುವವರಿಗೆ ಒಂದು ಮುಷ್ಟಿ ಭತ್ತ ಸಿಕ್ಕಿಲ್ಲ. ಕಳೆದ ವರ್ಷ, ಈ ವರ್ಷ ಆನೆಗೊಂಡಿ, ಜಡೆ ಮತ್ತು ಕಸಬಾ ಹೋಬಳಿಗಳಲ್ಲಿ ನನ್ನ ತಾಲ್ಲೂಕಿನ ಉದಾಹರಣೆಯನ್ನು ಕೊಡುತ್ತಿದ್ದೇನೆ, ನನ್ನ ಹಳ್ಳಿಯಲ್ಲಿಯೂ ಸಹ ಭತ್ತ ಬಂದಿಲ್ಲ. ಎಲ್ಲಾ ಕಡೆಗಳಲ್ಲಿಯೂ ಬರಗಾಲದ ಬಿಸಿ ತಟ್ಟಿದೆ. ತಮ್ಮ ಸಹಾಯ ಹಸ್ತವನ್ನು ಚಾಚದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಅಲ್ಪಸಂಖ್ಯಾತರ ಬಗ್ಗೆ ಇಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದಾರೆ. ನಾಳೆ ಬಡ್ಜೆಟ್ ಭಾಷಣ ಮಾಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ ವಿದ್ಯಾರ್ಥಿಗಳಿಗೆ ಹೆಚ್ಚು ಹಾಸ್ಟೆಲ್‌ಗಳನ್ನು ಕಟ್ಟಿಸುವುದಕ್ಕೆ ಇಷ್ಟು ಹಣವನ್ನು ಇಟ್ಟಿದ್ದೇವೆ ಎಂದು ಹೇಳುವಂತಹ ನಿಮ್ಮ ನೀತಿ ಏನಿದೆ ಅದು

ಶತ ಶತಮಾನಗಳಿಂದ ತುಳಿತಕ್ಕೆ ಒಳಗಾಗಿರತಕ್ಕ ಸಮಾಜಕ್ಕೆ ನಿಮ್ಮ ಯೋಜನೆಗಳನ್ನು ಹೇಳುವುದನ್ನು ಬಿಟ್ಟರೆ ನೀವೇನು ಮಾಡುತ್ತೀರಿ ? ಸಾಮಾಜಿಕ ನ್ಯಾಯವನ್ನು ಕೊಡುವುದಕ್ಕೆ ನಿಮಗೆ ಸಾಧ್ಯವಾಗುತ್ತದೆಯೋ ? ನಾನು ಹೆಚ್ಚು ಆ ವಿವರಕ್ಕೆ ಹೋಗುವುದಿಲ್ಲ.

ಇನ್ನು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಬಗ್ಗೆ ಹೇಳುವುದಾದರೆ, ವೆಂಕಟಸ್ವಾಮಿಯವರ ಆಯೋಗ ಕೊಟ್ಟಂತಹ ವರದಿಯನ್ನು ಕೆಲವು ಕೋಮಿನವರು ನಮಗೆ ಪೆಟ್ಟಾಗಿದೆ ಎಂದು ತಮ್ಮ ಬೇಡಿಕೆಯನ್ನು ಇಟ್ಟಾಗ, ಸರ್ಕಾರ ಮತ್ತೊಂದು ಆಯೋಗವನ್ನು ನೇಮಕ ಮಾಡಿ ಆ ವರದಿಯನ್ನು ತರಿಸಿಕೊಳ್ಳುತ್ತೇವೆ, ಎಂದು ಸರ್ಕಾರದವರೇ ಹೇಳಿದ್ದಾರೆ. ನೀವು ಹೇಳಿರತಕ್ಕದ್ದು ರಾಜಕೀಯವಾಗಿರತಕ್ಕದ್ದು, ನಿಜವಾಗಿಯೂ ಹೃದಯ ಇಟ್ಟು ಕೆಲಸ ಮಾಡುವವರು ಹೇಳುವ ಮಾತಲ್ಲ. ವೆಂಕಟಸ್ವಾಮಿಯವರ ಆಯೋಗದ ವರದಿಯ ಬಗ್ಗೆ ಮಾನ್ಯ ಬಸವಣ್ಣಪ್ಪನವರು ಇದು ವೈಜ್ಞಾನಿಕವಾಗಿ ತಯಾರಾದ ವರದಿಯಾಗಿದೆ ಎಂದು ಹೇಳಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆನಂತರ ಅಲ್ಪಸಂಖ್ಯಾತರ ಬಗ್ಗೆ, ನಮ್ಮಲ್ಲಿ ಮುಸ್ಲಿಂ ಬಾಂಧವರು ಇದ್ದಾರೆ, ಕ್ರಿಶ್ಚಿಯನ್ ಬಾಂಧವರು ಇದ್ದಾರೆ. ಇವರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಎಲ್ಲೂ ಹೇಳಿಲ್ಲ. ಆಮೇಲೆ ಸಮಾಜದಲ್ಲಿರತಕ್ಕಂಥ ಕಡುಬಡವರಿಗೆ ಹಿಂದೆ ನೀವು ಹೇಳಿಬಿಟ್ಟಿರಿ. ಚುನಾವಣೆ ಕಾಲದಲ್ಲಿ ಏನು ಪ್ರಸ್ತಾಪ ಇತ್ತು ? ೨೦ ರೂಪಾಯಿಗೆ ಒಂದು ಜೊತೆ ಪಂಚೆ ಒಂದು ಜೊತೆ ಶರಟು, ಆಮೇಲೆ ಒಂದು ಜತೆ ಸೀರೆ, ಒಂದು ಕುಪ್ಪಸದ ಖಣ, ಬಯಲು ಸೀಮೆ ಭಾಷೆಯಲ್ಲಿ ಹೇಳುವುದಾದರೆ, ಇದೆಲ್ಲಾ ಕೊಡುತ್ತೇವೆ ಎಂದು ಹೇಳಿದ್ದೀರಿ. ನಂತರ ಅದು ೧೫ ರೂಪಾಯಿಗೆಂದು ಹೇಳಿದರು. ಪಟ್ಟಣ, ನಗರ ಪ್ರದೇಶ ಹಳ್ಳಿಗಳು ಎಲ್ಲರಿಗೂ, ಏನು ಇವರು ಕಾಮಧೇನು ಇದ್ದ ಹಾಗೆ. ಕೇಳಿದವರಿಗೆಲ್ಲ ಕೊಡುತ್ತೇವೆ ಎಂದು ಹೇಳಿದರು. ಅದು ಏನಾಯಿತು ? ಎಲ್ಲಿಹೋಯಿತು ನಿಮ್ಮ ಕಾರ್ಯಕ್ರಮ ? ಚುನಾವಣೆ ಕಾಲದಲ್ಲಿ ಹೇಳಿದ್ದೇ ಹೇಳಿದ್ದು ? ಆಮೇಲೆ ಚುನಾವಣೆ ಮುಗಿದ ನಂತರ ಮುಂದೆ ಕೊಡುತ್ತೇವೆ ಎಂದು ಹೇಳಿದರು. ಇದು ಒಂದು ದೊಡ್ಡ fraud playd on the electorate of Karnataka State.

ಎಲ್ಲಾ ಹಳ್ಳಿಗಳಿಗೂ ಈ ರೀತಿ ಕೊಡುತ್ತೇವೆ ಎಂದು ಹೇಳಿ ಕೊನೆಗೆ ಏನು ಮಾಡಿದಿರಿ ? ಒಂದೊಂದು ಜಿಲ್ಲೆಗೆ ಒಂದೊಂದು ತಾಲೂಕನ್ನು ಆರಿಸಿಕೊಂಡು ಕೊಡುತ್ತೇವೆ ಎಂದು ಹೇಳಿದಿರಿ. ಶಿವಮೊಗ್ಗ ಜಿಲ್ಲೆಯಲ್ಲಿ ನಿಮ್ಮವರು ಇಬ್ಬರು ಮಂತ್ರಿಗಳಿದ್ದಾರೆ. ಮಾನ್ಯ ಬಸವಣ್ಣಪ್ಪನವರು ಮತ್ತು ಜೆ. ಹೆಚ್. ಪಟೇಲರ್‌ರವರು. ಬಸವನಗೌಡರು ಹೋದರು, ಸಾಲೇತ್ ಸಿದ್ದಪ್ಪನವರು ಹೋದರು. ಸೀರೆ, ಕುಪ್ಪಸ ಕೊಟ್ಟರೇ ? ಸೀರೆ ಕುಪ್ಪಸ ಮಾಯವಾಗಿ ಹೋಯಿತು. ಎಲ್ಲಾ ಹಳ್ಳಿಗಳಿಗೂ ಕೊಡುತ್ತೇವೆ ಎಂದು ಹೇಳಿದವರು, ಒಂದೊಂದು ಜಿಲ್ಲೆಯ ಒಂದೊಂದು ತಾಲೂಕಿಗೆ ಮಾತ್ರ ಎಂದು ಏಕೆ ಹೇಳಿದಿರಿ ? ೮೫ರ ಚುನಾವಣೆಯಲ್ಲಿ ಎಲ್ಲಾ ಹಳ್ಳಿಗಳಿಗೂ ಕೊಡುತ್ತೇವೆ ಎಂದು ಹೇಳಿದವರು, ತಾಲ್ಲೂಕಿಗಾದರೂ ಕೊಡುತ್ತಿದ್ದೀರಾ ? ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಕಾರವಾರ ಜಿಲ್ಲೆ, ರಾಯಚೂರು, ಬೀದರ್, ಗುಲ್ಬರ್ಗಾ, ಬಿಜಾಪುರದಲ್ಲಿ ಏನು ಕೊಟ್ಟಿದ್ದೀರಿ ? ಎಲ್ಲಾ ಅಂಕಿ ಅಂಶಗಳು ನನ್ನ ಹತ್ತಿರ ಇವೆ. ಅವುಗಳನ್ನು ಉಲ್ಲೇಖ ಮಾಡುವುದಕ್ಕೆ ಈಗ ನಾನು ಹೋಗುವುದಿಲ್ಲ, ಅದಕ್ಕೆ ಕಾಲಾವಕಾಶವಿಲ್ಲ. ಈ ವಿಷಯ ಬಂದಾಗ ಹೇಳುತ್ತೇನೆ. ಆ ಸಂದರ್ಭದಲ್ಲಿ ಈ ಅಂಕಿಅಂಶಗಳನ್ನು, ಜಿಲ್ಲಾವಾರಾಗಿ ಕೊಡುತ್ತೇನೆ. ೧೯ ಜಿಲ್ಲೆಗಳದ್ದೂ ವಿವರವನ್ನು ಕೂಡ ತರಿಸಿಟ್ಟಿದ್ದೀನೆ. ಸೀರೆ ಕುಪ್ಪಸ, ಕಣಗಳನ್ನು ಪಂಚೆಗಳನ್ನು ಕೊಡುತ್ತೇವೆ ಎಂದು ಓಟು ತೆಗೆದುಕೊಂಡು ಜನತೆಗೆ ದೊಡ್ಡ ಅನ್ಯಾಯ, ಮೋಸ ಮಾಡಿದ್ದೀರಿ ಎಂದು ಹೇಳುತ್ತೇನೆ. ಗ್ರಾಮಾಭಿವೃದ್ಧಿ ಬಗ್ಗೆ ನಿಮಗೆ ನಂಬಿಕೆ ಇಲ್ಲ, ಬಡವರು ಮೈಮುಚ್ಚಿಕೊಂಡು ಜೀವನ ಮಾಡಬೇಕೆಂಬ ಬಗ್ಗೆ ನಿಮಗೆ ನಂಬಿಕೆ ಇಲ್ಲ. ಯೋಜನೇತರ ಬಾಬಿನಿಂದ ಹಣವನ್ನು ತೆಗೆದಿಟ್ಟಿದ್ದರೂ ಕೂಡ ಅದನ್ನು ಪೂರೈಸುವುದಕ್ಕೆ ಆಗದೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿದೆ. ಇದನ್ನು ಬಜೆಟ್ ಮಂಡನೆ ಆದಮೇಲೆ ಮಾತನಾಡೋಣ. ಸಂಬಳ ಕೊಡುವ ವಿಚಾರದಲ್ಲಿ, ಬಿಲ್ ಪಾವತಿ ವಿಚಾರದಲ್ಲಿ ಹಣ ಕೊಡಬೇಡವೆಂದು ಹೇಳಿದಾಗ, ಅನೇಕ ಜನ ದೂರು ಕೊಡುವ ಮಟ್ಟಿಗೆ ಆರ್ಥಿಕ ಪರಿಸ್ಥಿತಿಯನ್ನು ನೀವು ತಂದಿಟ್ಟಿದ್ದೀರಿ. ಆಮೇಲೆ ಮನೆಗೊಂದು ಉದ್ಯೋಗದ ಬಗ್ಗೆ ಹೇಳಿದ್ದೀರಿ. ಮನೆಗೊಂದು ಉದ್ಯಮ, ಇಂಡಸ್ಟ್ರಿಯನ್ನು ನಾವು ಕೊಡುತ್ತೇವೆ ಎಂದು ಹೇಳಿ, ಒಂದು ಸಾವಿರ, ಐದುನೂರು ರೂಪಾಯಿ ಕೊಡುತ್ತೇವೆ ಎಂದು ಹೇಳಿದವರು ನೀವು. ಎಲ್ಲಿ ನಿಮ್ಮ ಇಂಡಸ್ಟ್ರಿ ? ಇವತ್ತು ವಿದ್ಯಾವಂತ ನಿರುದ್ಯೋಗಿಗಳು ಮತ್ತು ಅವಿದ್ಯಾವಂತ ನಿರುದ್ಯೋಗಿಗಳು ಇಬ್ಬರಿಗೂ ನಿಮ್ಮ ಸಹಾಯ ಇಲ್ಲ. ಹೀಗಾದರೆ ನಿಮ್ಮ ಸರ್ಕಾರದಿಂದ ಈ ಸಮಾಜಕ್ಕೆ, ಈ ವರ್ಗದ ಗುಂಪಿಗೆ ಸಿಗಬೇಕಾದ ನ್ಯಾಯ ಸಿಕ್ಕಿದೆಯೋ ಎಂದು ಈ ಸಂದರ್ಭದಲ್ಲಿ ನಾನು

ಪ್ರಸ್ತಾಪ ಮಾಡಬೇಕಾಗಿದೆ. ಆನಂತರ, ಇವರ ಆಡಳಿತದಲ್ಲಿ, ಇದೇನು ಪ್ರಜಾಪ್ರಭುತ್ವವಾದಿ ಸರ್ಕಾರ ಎಂದು ಹೇಳಿಕೊಂಡಿದ್ದಾರೆ, ಇದರಲ್ಲಿ ಲಂಚಗುಳಿತನವನ್ನು ಸಂಪೂರ್ಣವಾಗಿ ನಿಗ್ರಹ ಮಾಡುತ್ತೇವೆ ಎಂದು ಹೇಳಿದ್ದರು. ಇಡೀ ರಾಜ್ಯಪಾಲರ ಭಾಷಣದಲ್ಲಿ, ಸರ್ಕಾರಿ ಭಾಷಣದಲ್ಲಿ ಇದರ ಬಗ್ಗೆ ಒಂದು ಪದವನ್ನಾದರೂ ತೋರಿಸುತ್ತೀರಾ ? ಆಡಳಿತವನ್ನು ಚೊಕ್ಕ ಮಾಡತಕ್ಕಂಥ ವಿಚಾರದಲ್ಲಿ, ಲಂಚಗುಳಿತನ ವಿಚಾರದಲ್ಲಿ ಒಂದು ಪದ ಪ್ರಯೋಗವಾದರೂ ಇದೆಯೋ ?

ಯಾವ ಯಾವ ಕಾರ್ಯಕ್ರಮಗಳು ಇಲ್ಲಿ ಇವೆ ? ಏಕೆ ನೀವು ಆ ರೀತಿ ಹೇಳಿದ್ದೀರಿ ? ಸಾರಾಯಿ ಬಾಟ್ಲಿಂಗ್ ಹಗರಣ ಇರಬಹುದು, ಸ್ಪಿರಿಟ್ ಹಗರಣ ಇರಬಹುದು, ಯಾವುದೇ ಇರಬಹುದು. ಲಂಚ ನಿಗ್ರಹ ಮಾಡುವಂಥ ಹಕ್ಕು ನಿಮ್ಮ ಸರ್ಕಾರಕ್ಕೆ ಸಾಧ್ಯವೇ ಇಲ್ಲ. ಆ ಒಂದು ಹಕ್ಕನ್ನು ನೀವು ಕಳೆದುಕೊಂಡಿದ್ದೀರಿ. ಯಾವ ಆಫೀಸಿಗೆ ಹೋದರೂ ಕೂಡ ಲಂಚ ಕೊಡದೆ ಕೆಲಸ ಆಗುತ್ತಿಲ್ಲ. ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ಲಂಚ ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಇದನ್ನು ನಿಲ್ಲಿಸುವ ಪ್ರಯತ್ನ ಮಾಡಬೇಕು ಇವತ್ತು ಲಂಚದ ರೇಟು ಹಲವಾರು ಪಟ್ಟು ಜಾಸ್ತಿಯಾಗಿದೆ. ಲಂಚ ಕೊಡದೇ ಯಾವ ಕೆಲಸವೂ ಆಗುವುದಿಲ್ಲ ಎಂಬ ಒಂದು ಕಾನೂನನ್ನು ಪ್ರಕಟಣೆ ಮಾಡುವುದೊಂದು ಬಾಕಿ ಇದೆ. ನೌಕರಿ ಮಾಡುವವನಿಗೆ ಈ ರೀತಿ ತೆಗೆದುಕೊಳ್ಳತಕ್ಕ ಸಾಧ್ಯತೆ ಇದೆ ಎನ್ನತಕ್ಕಂಥ ಕಾನೂನನ್ನು ಜಾರಿಗೆ ತರಬೇಕಾಗಿದೆ. ಇವತ್ತು ವ್ಯಾಪಕವಾಗಿ ಎಲ್ಲಾ ಕಡೆ ಲಂಚ ನಡೆದಿದೆ, ಕೆಲವು ಆಫೀಸುಗಳಲ್ಲಿ ಅವರವರೇ ಮುಖ್ಯಮಂತ್ರಿಗಳಾಗಿದ್ದಾರೆ. ಈ ವಿಚಾರದಲ್ಲಿ ಪೂರ್ತಿ ನಿಮ್ಮ ಹಿಡಿತ ತಪ್ಪಿಹೋಗಿದೆ. ನಿಮ್ಮ ಇಡೀ ಆಡಳಿತದಲ್ಲಿ ಅಡಿಯಿಂದ ಮುಡಿಯವರೆಗೆ ಅಪಾದಮಸ್ತಕವಾಗಿ ಲಂಚ ಮಯವಾಗಿದೆ. ಇಂತಹ ದುರಾಡಳಿತವನ್ನು ಕೊಟ್ಟಿರುವ ನೀವು ಪ್ರಜಾಪ್ರಭುತ್ವದ ಬಗ್ಗೆ, ಮೌಲ್ಯಗಳ ಬಗ್ಗೆ ಮಾತನಾಡುವ ಹಕ್ಕು ನಿಮಗೆ ಎಲ್ಲಿಂದ ಬರುತ್ತದೆ ಎನ್ನುವುದನ್ನು ನಾನು ಕೇಳಬೇಕಾಗಿದೆ.

ಇನ್ನು ಕ್ಯಾಪಿಟೇಷನ್ ಫೀ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಕ್ಯಾಪಿಟೇಷನ್ ಫೀ ನಿಲ್ಲಿಸುತ್ತೇವೆಂದು ಹೇಳಿ. ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಕೊಡುತ್ತೇವೆಂದು ಬಹುಶಃ ಹಾಸನ ಇರಬಹುದು, ಮಾನ್ಯ ದೇವೇಗೌಡರು ಹಾಗೂ ಮುಖ್ಯಮಂತ್ರಿಗಳು ಇದ್ದಂಥ ಸಭೆ ಇರಬಹುದು ಎಂದು ನೆನಪು. ಆ ಪತ್ರಿಕೆ ನನಗೆ ಸಿಗಲಿಲ್ಲ. ಅಲ್ಲಿ ಏನು ಹೇಳಿದರು, ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಕೊಡುತ್ತೇವೆಂದು ಹೇಳಿದರು. ಸರ್ಕಾರಿ ಇಲಾಖೆ ಮುಖಾಂತರ ಕೊಡುತ್ತೇವೆಂದುಹೇಳಿದರು. ಇದನ್ನು ಒಪ್ಪಿ ಕೊಳ್ಳೋಣ. ಆದರೆ, ಇವತ್ತು ಖಾಸಗಿಯಾಗಿ ಕಾಲೇಜುಗಳನ್ನು ಕೊಡುತ್ತಾ ಹೋಗುತ್ತಿದ್ದಾರೆ. ಖಾಸಗಿ ಕಾಲೇಜುಗಳಲ್ಲಿರತಕ್ಕ ಸರ್ಕಾರಿ ಸೀಟುಗಳೂ ಕೂಡ ಇವತ್ತು ಪೂರ್ತಿಯಾಗಿ ಮಾರಾಟ ಮಾಡಿದ್ದಾರೆ. ಹಿಂದೆ ಏನೋ ಒಂದು ಪರ್ಸೆಂಟೇಜ್ ಇತ್ತು. ಇವತ್ತು ಸರ್ಕಾರದ ಪುಕ್ಕಟೆ ಸೀಟು ಕೊಡುವುದಕ್ಕಾಗುವುದಿಲ್ಲ. ಖಾಸಗಿ ಕಾಲೇಜುಗಳವರು ಯಥೇಚ್ಛವಾಗಿ ಹಣವನ್ನು ಸ್ವೀಕಾರ ಮಾಡುತ್ತಿದ್ದಾರೆ. ಅದು ನೀವು ಮಾಡಿರತಕ್ಕಂಥ ವೈಖರಿ. ಕ್ಯಾಪಿಟೇಷನ್ ಫೀಯನ್ನು ನಿಲ್ಲಿಸುತ್ತೇವೆಂದು ಹೇಳಿದವರು ಇವತ್ತು ಅದನ್ನು ಹೆಮ್ಮರವಾಗಿ ಬೆಳೆಸಿದ್ದೀರಿ. ಲಂಚಗುಳಿತನ, ಕ್ಯಾಪಿಟೇಷನ್ ಫೀ ವ್ಯಾಪಕವಾಗಿ, ವ್ಯವಸ್ಥಿತವಾಗಿ ಬೆಳೆಯುತ್ತಿದೆ.

ಮಾನ್ಯ ಸಭಾಧ್ಯಕ್ಷರೇ, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಪದೇ ಪದೇ ಹೇಳಿದ್ದೇವೆ, ಆದರೂ ಮಂಜೂರಾತಿ ಕೊಟ್ಟಿಲ್ಲ ಎಂದು ಅವರು ಹೇಳಿದರು. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಕೇಂದ್ರ ಸರ್ಕಾರದಿಂದ ಬಂದ ಕಾಗದ ಪತ್ರಗಳನ್ನು ಈ ಸಭೆಯಲ್ಲಿ ಇಟ್ಟಿದ್ದೆ. ಫಾರೆಸ್ಟ್ ಇಲಾಖೆಯಿಂದ, ನೀರಾವರಿ ಇಲಾಖೆಯಿಂದ ಕೊಡತಕ್ಕ ಕೆಲವೊಂದು ವಿವರಗಳನ್ನು ರಾಜ್ಯ ಸರ್ಕಾರ, ಕೇಂದ್ರಕ್ಕೆ ಕೊಡದೇ ಇರುವುದರಿಂದ, ಕೇಂದ್ರದವರು ಹಾಗೆಯೇ ಇದನ್ನು ಇಟ್ಟು ಕೊಂಡಿದ್ದರು. ಇದರಿಂದಾಗಿ ನೀವು, ಕೇಂದ್ರದವರು ಹಾಗೆಯೇ ಇದನ್ನು ಇಟ್ಟುಕೊಂಡಿದ್ದಾರೆಂದು ಅಪಾದನೆ ಮಾಡುವುದು ಸರಿಯಲ್ಲ.

ಆಮೇಲೆ ಈ ಸರ್ಕಾರ ೧೯೯೪ರಲ್ಲಿ ಅಸ್ತಿತ್ವಕ್ಕೆ ಬಂದ ಕೂಡಲೇ ಹೆಲಿಕಾಪ್ಟರ್‌ನಲ್ಲಿ ಹತ್ತುವುದಿಲ್ಲವೆಂದು ಹೇಳಿದರು. ಮಾನ್ಯ ಗುಂಡೂರಾವ್ ಸರಕಾರ ಇದ್ದಾಗ ಹೆಲಿಕಾಪ್ಟರ್‌ನಲ್ಲಿ ಸರಕಾರ ನಡೆಯುತ್ತಿದೆ ಎಂಬ ಮಾತನಾಡಿರುವವರು ನೀವು, ನಾನೂ ಕೂಡಾ ಆಡಿದೆ. ಪದೇ ಪದೇ ಹೆಲಿಕಾಪ್ಟರ್ ಪ್ರವಾಸ ಮಾಡುವುದು ಸರಿಯಲ್ಲ, ನಾವು ಹೋಗಬೇಕು ಜನಗಳನ್ನು ಕಾಣಬೇಕು, ಜನಗಳ ಸಂಪರ್ಕ ಇಟ್ಟುಕೊಳ್ಳಬೇಕು ಎಂಬ ದೃಷ್ಟಿಯಿಂದ ನಾನು ಹೇಳಿದೆ. ಮೊನ್ನೆ ಮೊನ್ನೆ ಕೂಡಾ ಹೆಲಿಕಾಪ್ಟರ್ ಬಳಕೆಯ ಬಗ್ಗೆ ಪ್ರಶ್ನೆ ಬಂತು. ಯಾರೋ ಒಬ್ಬ ಸದಸ್ಯರು, ಬಹುಶಃ ಮಾನ್ಯ ಮಲ್ಲಾರಿಗೌಡ ಪಾಟೀಲ್‌ರವರು ಎಂದು ಕಾಣುತ್ತದೆ, ಹೆಲಿಕಾಪ್ಟರ್ ಬಗ್ಗೆ ಪ್ರಶ್ನೆ ಕೇಳಿದರು, ಎಷ್ಟು ಸಲ ಇದನ್ನು ಉಪಯೋಗಿಸಲಾಗಿದೆ, ಎಷ್ಟು ಖರ್ಚು ಬಂದಿದೆ ಎಂದು ಪ್ರಶ್ನೆ ಕೇಳಿದ್ದಾರೆ, ಅವಕ್ಕೆ ಉತ್ತರವೂ

ಬಂದಿದೆ. ಹೆಲಿಕ್ಯಾಪ್ಟರ್ ಹತ್ತಬಾರದು ಎನ್ನುವ ದೃಷ್ಟಿಯಿಂದ ತಾವು, ಅದನ್ನು ಹತ್ತಿ ಬಿಟ್ಟರೆ ದೊಡ್ಡ ಅನ್ಯಾಯವಾಗುತ್ತದೆ, ಹಿಂದೆಲ್ಲಾ ಅದರ ದುರುಪಯೋಗವನ್ನು ಮಾಡಿದ್ದಾರೆ ಎಂಬ ಮಾತನ್ನು ಹೇಳುತ್ತಾ, ಅದನ್ನು ಈಗ ನೀವು ಉಪಯೋಗಿಸುತ್ತಿದ್ದೀರಿ. ಎಷ್ಟು ಸಾರಿ ಮುಖ್ಯಮಂತ್ರಿಗಳು ಹೆಲಿಕ್ಯಾಪ್ಟರ್‌ನಲ್ಲಿ ಪ್ರವಾಸ ಮಾಡಿಲ್ಲ ? ಮುಖ್ಯಮಂತ್ರಿಗಳು, ದೇವೇಗೌಡರು, ಪಟೇಲ್‌ರವರು ಎಲ್ಲರೂ ಓಡಾಡಿದರು. ಪಟೇಲ್‌ರವರು ಒಬ್ಬರೇ ನಮ್ಮ ಶಿವಮೊಗ್ಗ ಜಿಲ್ಲೆಗೂ ಕೂಡಾ ಬಂದಿದ್ದರು. ಎಷ್ಟು ಜನ ಮಂತ್ರಿಗಳು ಅದರಲ್ಲಿ ಓಡಾಡಲಿಲ್ಲ. ಹೆಲಿಕ್ಯಾಪ್ಟರ್ ಇರುವುದು ಹತ್ತುವುದಕೋಸ್ಕರ, ಸಂದರ್ಭ ಬಂದಾಗ, ಅರ್ಜೆಂಟ್ ಬಂದಾಗ, ನಮ್ಮ ಸರಕಾರ ಉಪಯೋಗಿಸಬೇಕು, ಸರಕಾರದ ಕಾರ್ ಇದ್ದ ಹಾಗೆ, ಕಾರ್ ನೆಲದ ಮೇಲೆ ಹೋಗುತ್ತದೆ ಅದು ಆಕಾಶದಲ್ಲಿ ಮೇಲೆ ಹೋಗುತ್ತದೆ. ಉಪಯೋಗ ಮಾಡತಕ್ಕಂಥ ಸಂದರ್ಭ ಬಂದಾಗ ರಾಜ್ಯ ಸರಕಾರ ಉಪಯೋಗ ಮಾಡಬೇಕಾಗುತ್ತದೆ. ಅದನ್ನು ಮುಟ್ಟಿದರೆ, ಮುಟ್ಟುಬಿಟ್ಟು ಎನ್ನುವ ದೃಷ್ಟಿ ಅಲ್ಲ. ನೀವು ಹೇಳಿದಿರಿ, ನಾವು ಹೆಲಿಕಾಪ್ಟರ್ ಹತ್ತುವುದಿಲ್ಲ, ಅಂತಹ ಜನ ನಾವಲ್ಲ ಎಂದು. ಸ್ವಾಮಿ ಇತ್ತೀಚೆಗೆ ಇವರು ಹೆಲಿಕಾಪ್ಟರ್ ಬಿಟ್ಟು ಓಡಾಡುವ ಪದ್ಧತಿಯನ್ನೇ ಇಟ್ಟಿಲ್ಲ. ಹೆಲಿಕಾಪ್ಟರ್ ಪ್ರಯಾಣ ಅವ್ಯಾಹತವಾಗಿ ನಡೆಯುತ್ತಿದೆ. ಏತಕ್ಕೆ ಇಂತಹ ಮೋದ ಹೂಡಿ, ಕರ್ನಾಟಕದ ಜನತೆಯನ್ನು ನಂಬಿಸಿ ಅನ್ಯಾಯ ಮಾಡುತ್ತಿದ್ದೀರಿ ?

ಅಸತ್ಯವನ್ನು ಏತಕ್ಕೆ ನುಡಿಯುತ್ತಿದ್ದೀರಿ ಎಂಬುದನ್ನು ನಾನು ಪ್ರಸ್ತಾಪ ಮಾಡುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಒಂದೂವರೆ ಗಂಟೆ ಆಯಿತು. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಇನ್ನು ೧೦-೧೫ ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಹಿಂದೆ ಕೂಡ ಈ ಸದನದಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಕನ್ನಡ ಭಾಷೆ ಬಗ್ಗೆ ಮಾತನಾಡಬೇಕಾದರೆ ಅನೇಕಸಾರಿ ನಾವು ಹೇಳಿದ್ದೇವೆ. ಅಡಿಯಿಂದ ಮುಡಿಯವರೆಗೆ ಶಿಕ್ಷಣ ಕ್ಷೇತ್ರ ಮತ್ತು ಆಡಳಿತ ಕ್ಷೇತ್ರದಲ್ಲಿ ಅಷ್ಟೇ ಅಲ್ಲ ನ್ಯಾಯಾಲಯದಲ್ಲೂ ಕೂಡ ಇದನ್ನು ಜಾರಿಗೆ ತರಬೇಕು ಎನ್ನುವ ಮಾತನ್ನು ಪದೇ ಪದೇ ಹೇಳಿ, ಇನ್ನೂ ಕನ್ನಡ ಬೆರಳಚ್ಚು ಯಂತ್ರಗಳನ್ನು ನೀವು ಜಾಸ್ತಿ ತರಿಸುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದೀರಿ. ಪದೇ ಪದೇ ಇದನ್ನು ಹೇಳಿದ್ದೀರಿ ಇದನ್ನು ಯಾವಾಗ ಮಾಡಬೇಕೆಂದು ಇದ್ದೀರಿ ? ನೀವು ಇಟ್ಟಿರತಕ್ಕಂತ ಹಣ ನೋಡಿದರೆ ಕಳೆದ ವರ್ಷ, ಈ ವರ್ಷ ನೋಡಿದರೆ ಇದು ಗೊತ್ತಾಗುತ್ತದೆ. ನೀವು ವಿಶ್ವ ಕನ್ನಡ ಮೇಳ ಮಾಡುವುದರಲ್ಲಿ ಜೋರಾಗಿದ್ದೀರಿ. ಇದಕ್ಕೆ ಲಕ್ಷಾಂತರ ರೂಪಾಯಿಗಳ ಹಣ ಖರ್ಚು ಮಾಡಿದ್ದೀರಿ. ದೆಹಲಿಯಲ್ಲಿ ಸಾಹಿತ್ಯ ಅಕಾಡಮಿಯ ವತಿಯಿಂದ ಒಂದು ಬೃಹತ್ ಕಾರ್ಯಕ್ರಮ ಮಾಡುತ್ತಿದ್ದೀರಿ. ನೀವು ಪ್ರಚಾರ ಪ್ರಿಯರು. ಇದಕ್ಕೆ ನಿಮ್ಮ ಸರಕಾರ ಹಿಂದೇಟು ಹಾಕುವುದಕ್ಕೆ ಹೋಗುವುದಿಲ್ಲ. ಪ್ರಚಾರಕ್ಕೆ ಎಷ್ಟು ಹಣ ಖರ್ಚಾದರೂ ಚಿಂತೆ ಇಲ್ಲ. ಮಾನ್ಯ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಪ್ರಚಾರಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದರ ಬಗ್ಗೆ ಆಮೇಲೆ ಬರುತ್ತೇನೆ. ಕರ್ನಾಟಕ ಸಾಹಿತ್ಯ ಅಕಾಡಮಿ ಬೆಂಗಳೂರು ಇದರ ವತಿಯಿಂದ ದೆಹಲಿಯಲ್ಲಿ ಅಂತರಭಾರತಿ ಕವಿ ಸಮ್ಮೇಳನವನ್ನು ಮಾಡುತ್ತಿದ್ದೀರಿ ಫೆಬ್ರವರಿ ೧೪ ಮತ್ತು ೧೫ ರಂದು ದೆಹಲಿಯ ಚಾಣಕ್ಯಪುರಿಯಲ್ಲಿ ಇದನ್ನು ಮಾಡುತ್ತಿದ್ದೀರಿ. ಈಗ ನೀವು ಇಷ್ಟೊಂದು ಕನ್ನಡದ ಬಗ್ಗೆ ಮಾತನಾಡಿ ಇಷ್ಟೊಂದು ಹಣವನ್ನು ಖರ್ಚು ಮಾಡಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಇನ್ನೂ ಕೆಳಗಡೆಯ ಹಂತದಲ್ಲಿರತಕ್ಕ ಕಚೇರಿಗಳಲ್ಲಿ ಸಂಪೂರ್ಣವಾಗಿ ಕನ್ನಡ ಪರಿಪಾಲನೆ ಮಾಡುವುದಕ್ಕೆ ಆಗಿಲ್ಲ, ಮೇಲುಗಡೆ ಇರತಕ್ಕ ಕಚೇರಿಗಳಲ್ಲಿ ಇನ್ನೂ ಕೂಡ ಇಂಗ್ಲೀಷ್‌ನಲ್ಲಿ ವ್ಯವಹಾರ ನಡೆಯುತ್ತಿದೆ. ಕನ್ನಡಿಗರಿಗೆ ಉದ್ಯೋಗ ಅವಕಾಶ ಕೊಡುವ ವಿಚಾರದಲ್ಲಿ ಸರೋಜಿನಿ ಮಹಿಷಿ ಕಮಿಟಿ ರಿಪೋರ್ಟ್ ಬಂತು. ನೀವು ಅವರಿಗೆ ಒಬ್ಬ ಮಂತ್ರಿಸ್ಥಾನ ಕೊಟ್ಟಿದ್ದೀರಿ. ಅವರಿಗೆ ಕಾರು ಇತ್ಯಾದಿ ಎಲ್ಲಾ ಸ್ಥಾನಮಾನ ಕೊಟ್ಟಿದ್ದೀರಿ. ಅವರು ವರದಿ ಕೊಟ್ಟಿದ್ದರೂ ಕೂಡ ಇವತ್ತಿಗೂ ನನಗೆ ಗೊತ್ತಿರುವ ಹಾಗೆ ಸರೋಜಿ ಮಹಿಷಿ ಸಮಿತಿಯನ್ನು ವಜಾ ಮಾಡಿಲ್ಲ ಎಷ್ಟು ವರ್ಷ ನೀವು ಅವರಿಂದ ಈ ಕೆಲಸ ಮಾಡಿಸುತ್ತೀರಿ, ೧೯೮೩ರಿಂದ ಈ ಒಂದು ಸಮಿತಿಯನ್ನು ಮಾಡಿದ್ದೀರಿ.

ನಿಮ್ಮ ಪಕ್ಷದವರಿಗೆ ನೀವು ಒಂದು ಸ್ಥಾನ ಮಾನವನ್ನು ಕೊಟ್ಟುಕೊಳ್ಳುವುದಕ್ಕೆ ಈ ಕೆಲಸ ಮಾಡಿದಿರಿ. ಡಾಕ್ಟರ್ ಸರೋಜಿನಿ ಮಹಿಷಿಯವರು ನಿಮ್ಮ ಪಕ್ಷದವರು, ಅವರಿಗೆ ಒಬ್ಬ ಮಂತ್ರಿಯ ಸ್ಥಾನ ಮಾನವಿರಬೇಕು, ಅವರು ವಿಮಾನದಲ್ಲಿ ಪುಕ್ಕಟೆಯಾಗಿ ಹೋಗಿ ಬರಬೇಕು. ಅವರಿಗೆ ಎಲ್ಲಾ ರೀತಿಯ ಸರ್ಕಾರಿ ಮರ್ಯಾದೆಗಳು ಸಿಗುತ್ತಿರಬೇಕೆನ್ನುವ ದೃಷ್ಟಿಯಿಂದ ಮಾಡಿದಿರಿ. ಅವರಿಂದ ವರದಿಯನ್ನು ಸರ್ಕಾರ ತೆಗೆದುಕೊಂಡ ಮೇಲೆ ಅವರಿಗೆ ಇನ್ನೇನು ಕೆಲಸ ಇದೆ ? ಅಂತಹ ಸಂದರ್ಭ

ಬಂಧರೆ ಮತ್ತೊಂದು ಸಾರಿ ಬೇಕಾದರೆ ಅವರನ್ನೇ ನೇಮಿಸಿಕೊಳ್ಳಿ, ಅದು ನಿಮಗೆ ಬಿಟ್ಟಿದ್ದು. ದು ಈ ರೀತಿ ಇವತ್ತು ತಾವು ಸರ್ಕಾರದಿಂದ ಹಣವನ್ನು ಲೂಟಿ ಮಾಡುತ್ತಿದ್ದೀರಿ, ಸಾರ್ವಜನಿಕರ ಹಣವನ್ನು ಲೂಟಿ ಮಾಡುವುದಕ್ಕೆ ನೀವೇ ಕಾರಣಕರ್ತರೆಂದು ನಾನು ಈ ಸಂಧರ್ಭದಲ್ಲಿ ಹೇಳಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಅವರ ಸಮಿತಿಯನ್ನು ವಜಾ ಮಾಡಿ. ಇಲ್ಲಿಗೆ ನಿಲ್ಲಿಸಿ ಸಾಕು. ನಿಮ್ಮ ಪಕ್ಷದವರಿಗೆ ಒಂದು ಸ್ಥಾನಮಾನ ಕೊಡುವುದಕ್ಕೆ ರಾಜ್ಯದ ಬೊಕ್ಕಸದಿಂದ ಹಣವನ್ನು ಖರ್ಚುಮಾಡುವುದು ಸರಿಯಲ್ಲ. ಈ ಕೆಲಸವನ್ನು ತಾವು ತತ್‌ಕ್ಷಣದಿಂದಲೇ ನಿಲ್ಲಿಸ ಬೇಕು ಇನ್ನೊಂದು ಬಹಳ ಮುಖ್ಯವಾದಂಥ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ನಾನು ವಿರೋಧಪಕ್ಷದ ನಾಯಕನಾಗಿದ್ದಾಗ ನನ್ನ ಮೇಲೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿಸುತ್ತೇನೆಂದು ಹೇಳಿದಿರಿ, ಆ ಸಂಬಂಧವಾಗಿ ರಾಜ್ಯದ ಹೈಕೋರ್ಟಿಗೆ ತಾವು ಒಂದು ಪತ್ರ ಬರೆದು ಒಬ್ಬ ನ್ಯಾಯಾದೀಶರು ಬೇಕೆಂದು ಸಹ ಕೇಳಿದ್ದೀರಿ ಅದು ಏನಾಯಿತು ? ನ್ಯಾಯಾಧೀಶರನನ್ನು ತಾವು ನೇಮಿಸಿದ್ದೀರಾ ? ಹೈಕೋರ್ಟಿನವರು ಏನು ಹೇಳಿದರು. ಒಬ್ಬ ಸತ್ತ ವ್ಯಕ್ತಿಯ ಹೇಳಿಕೆ ಮುಂದಿಟ್ಟುಕೊಂಡು ನ್ಯಾಯಾಂಗ ತನಿಖೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರೂ ತಾವು ಕೇಳಲಿಲ್ಲ, ಆದ್ದರಿಂದ ಹೈಕೋರ್ಟಿನಿಂದ ಏನು ಉತ್ತರ ಬಂದಿದೆ ಎನ್ನುವುದನ್ನು ಈ ಸದನದಲ್ಲಿ ಇಡಿ. Please place all those recorps connected including the reply, if sent by the High Court, to rhe State Government. pleas Place them on the table of the House. I demand now, ಈಗ ನಾನು ಕೇಳುತ್ತಿದ್ದೇನೆ. ಸತ್ತ ವ್ಯಕ್ತಿಯ ಹೇಳಿಕೆಯನ್ನು ಮುಂದಿಟ್ಟುಕೊಂಡು ನ್ಯಾಯಾಂಗ ತನಿಖೆಯನ್ನು ಮಾಡಿಸುವುದಕ್ಕೆ ಬರುವುದಿಲ್ಲವೆಂದು ಅನೇಕ ಕಾನೂನು ತಜ್ಞರು ಹೇಳಿದರೂ ಕೂಡ ತಾವು ಕೇಳಲಿಲ್ಲ. ಏನಾದರೂ ಮಾಡಿ ಮಾನ್ಯ ಬಂಗಾರಪ್ಪನವರ ಮೇಲೆ ವಿಚಾರಣೆ ಮಾಡಿಸಲೇ ಬೇಕೆಂದು ಹೊರಟಿರಿ. ಹೈಕೋರ್ಟಿಗೆ ಪತ್ರವನ್ನು ಸಹ ಬರೆದಿರಿ. ಅದು ಏನಾಯಿತು ? ತಾವು ಪ್ರತಿಯೊಂದು ಘಟನೆಗೂ ಒಂದೊಂದು ನ್ಯಾಯಾಂಗ ತನಿಖೆಯನ್ನು ಮಾಡಿಸುತ್ತಿದ್ದೀರಿ. ಇದುವರೆವಿಗೂ ಲೆಕ್ಕವಿಲ್ಲದಷ್ಟು ನ್ಯಾಯಾಂಗ ತನಿಖೆಗಳನ್ನು ಮಾಡಿಸಿದಿರಿ. ತಾವು ಕೇಂದ್ರ ಸರ್ಕಾರದಲ್ಲಿದ್ದಾಗಲೂ ಸಹ ಇದೇ ಕೆಲಸವನ್ನು ಮಾಡಿದ್ದೀರಿ ಇಲ್ಲಿ ಈಗಲೂ ಸಹ ಇದೇ ಕೆಲಸವನ್ನು ಮಾಡುತ್ತಿದ್ದೀರಿ. ಕೇಳುವ ಘಟನೆಗಳಿಗೆ ಮಾತ್ರ ನ್ಯಾಯಾಂಗ ತನಿಖೆಗಳನ್ನು ಮಾಡದೆ ಎಲ್ಲದಕ್ಕೂ ನ್ಯಾಯಾಂಗ ತನಿಖೆಗಳು. ನಿಮ್ಮ ಹಣೆಬರಹಕ್ಕೆ ಒಂದು ವರ್ಷದಿಂದ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಿ ವಿಚಾರಣೆ ಮಾಡಿಸುವುದಕ್ಕೆ ಆಗಲಿಲ್ಲ. ಈ ಬಗ್ಗೆ ಹೈಕೋರ್ಟಿನಿಂದ ಏನು ಉತ್ತರ ಬಂದಿದೆ ಎನ್ನುವುದನ್ನು ಸದನದ ಮುಂದೆ ಇಡಿ ಈ ಮನೆಯ ಮಾನ್ಯ ಸದಸ್ಯರೆಲ್ಲರೂ ಸ್ವಲ್ಪ ಅದನ್ನು ಓದಿಕೊಳ್ಳಲಿ. ಇನ್ನು ನಿಮ್ಮ ಸರ್ಕಾರದ ಪ್ರಚಾರ ಯಾವ ಮಟ್ಟದಲ್ಲಿ ಮಾಡಿಕೊಂಡಿದೆ ಎನ್ನುವ ಬಗ್ಗೆ ಹೇಳುವುದಾದರೆ ನೀವು ಅಧಿಕಾರಕ್ಕೆ ಬಂದ ಮೇಲೆ ಬರೀ ಪ್ರಚಾರಕ್ಕಾಗಿಯೇ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವುದನ್ನು ಹೇಳುತ್ತೇನೆ. 'Onloker,' ಎಂಬ ಪುಸ್ತಕದಲ್ಲಿ How Mr, Hegde cultives the press ? ನಲ್ಲಿ ಈ ರೀತಿ ಬರೆದಿದ್ದಾರೆ,

> "At the end of Hegde's first year in office 1,250 articles had been written about him in the National press, Karnataka press and a few mnjor Tamil, Mnlyalm press. By the end of 1985 this number had risen to 3,690."

ಇವರ ಸಾಧನೆಗಳ ವಿಚಾರ ಇಲ್ಲಿ ಇಲ್ಲವೇ ಇಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಬಂಗಾರಪ್ಪನವರೇ ನ್ಯಾಷನಲ್ ಪ್ರೆಸ್‌ನ್ನು ಬುಕ್ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇ ? press has got its own role to play in democracy. That too in Indian politics, through-out it played a very important role.

ಶ್ರೀ ಎಸ್. ಬಂಗಾರಪ್ಪ,—ಮಾನ್ಯ ರಘುಪತಿಯವರೇ ಅದು ನಿಮಗೆ ಅರ್ಥವಾಗುವುದಿಲ್ಲ ತಾವು ಕುಳಿತುಕೊಳ್ಳಿ ನಾನು ಹೇಳುತ್ತೇನೆ. 'How Mr. Hegde cultives the press ? ನಲ್ಲಿ ಏನು ಹೇಳಿದ್ದಾರೆಂದರೆ.........

SRI M. RAGUPATHY.—It is different from booking. You said booking.

೫-೦೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಅನೇಕ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಮಾನ್ಯ ನಿಜಲಿಂಗಪ್ಪನವರು, ಮಾನ್ಯ ವೀರೇಂದ್ರಪಾಟೀಲ್‌ರವರು, ಮಾನ್ಯ ದೇವರಾಜ ಅರಸ್‌ರವರು ಹಾಗೂ ಮಾನ್ಯ ಗುಂಡೂರಾವ್‌ರವರು ಆಮೇಲೆ ಇವರು, ಈ ೫ನೇ ಮುಖ್ಯಮಂತ್ರಿಗಳನ್ನೂ ನೋಡುತ್ತಿದ್ದೇನೆ. ಅಂಥಾ ಸಂದರ್ಭದಲ್ಲಿ ಸೆಮಿನಾರ್‌ಗಳು ಮತ್ತೊಂದು ಬಂದಾಗ ಸ್ಪೀಚ್ ಕೊಡುವುದನ್ನು ಮಾಡಬೇಕಾಗುತ್ತದೆ. ಅದನ್ನು ಮಾಡಬಾರದೆಂದು ನಾನು ಹೇಳುವುದಿಲ್ಲ. ಆದರೆ, ಇವರು ಎಷ್ಟು ಬರೆಸಿರುವುದು? ಇದಕ್ಕೆ ಎಷ್ಟು ಹಣ ಖರ್ಚಾಗಿದೆ? ಈ ಪುಸ್ತಕವನ್ನು (ಮಾನ್ಯ ರಾಮಕೃಷ್ಣ ಹೆಗಡೆಯವರ ವಿಷಯಗಳು ಬಂದಿರುವ ಪುಸ್ತಕಗಳನ್ನು ಸದನದಲ್ಲಿ ತೋರಿಸಿದರು) ಕರ್ನಾಟಕ ಸರ್ಕಾರದ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ನವರು ಪಬ್ಲಿಷ್ ಮಾಡಿದ್ದಾರೆ. ಇದು ಒಂದೇ ಪುಸ್ತಕ ಅಲ್ಲ. ಇನ್ನೂ ರಾಶಿ ರಾಶಿ ಇದೆ, ಕೆಲವನ್ನು ಮಾತ್ರ ನಾನು ಇಲ್ಲಿಗೆ ತಂದಿದ್ದೇನೆ. ಇದನ್ನೂ ಗೌರ್ನಮೆಂಟ್ ಆಫ್ ಕರ್ನಾಟಕ ಪಬ್ಲಿಷ್ ಮಾಡಿದೆ. Roll of members of Parliament in cotemporary societv. ಇದರಲ್ಲಿ ಏನು ಹೇಳಿದ್ದಾರೆ ಎಂದರೆ ಇದು ಒಂದು ಸ್ಪೀಚ್, ಲೆಕ್ಚರ್ ಎಂದೂ ಸಹ ಇದನ್ನು ಕರೆಯಬಹುದು. ಈ ಪುಸ್ತಕವನ್ನು ಗೌರ್ನಮೆಂಟ್‌ನವರು ಕರ್ನಾಟಕ ಡಿಸೆಂಬರ್ ೧೯೮೬ರಲ್ಲಿ ಪಬ್ಲಿಷ್ ಮಾಡಿದ್ದಾರೆ. ಇದರಲ್ಲಿ ಮೆಂಬರ್ಸ್ ಆಫ್ ಪಾರ್ಲಿಮೆಂಟ್ ರೋಲ್ ಹೇಗಿರಬೇಕು ಎಂಬ ದೊಡ್ಡ ಬುದ್ಧಿವಾದ, ದೊಡ್ಡ ವ್ಯಾಖ್ಯಾನ, ಉವಾಚ ಮಾಡಿದ್ದಾರೆ. ಮೆಂಬರ್ ಆಫ್ ಪಾರ್ಲಿಯಮೆಂಟ್ ಇವರೂ ಸಹ ಆಗಿದ್ದರು. ಇವರು ಜನರ ಸಂಪರ್ಕವನ್ನು ಎಷ್ಟೆಷ್ಟು ಇಟ್ಟುಕೊಂಡಿದ್ದರೋ? ಆಮೇಲೆ ಇನ್ನೊಂದು ಪುಸ್ತಕದಲ್ಲಿ, ರಾಜ್ಯಗಳಿಗೆ ಹೆಚ್ಚಿನ ಹಕ್ಕು ಕೊಡಬೇಕು ಎನ್ನುವ ವಾದ ಇದೆ. It is a subject matter for argument. ರಾಜ್ಯ ಬಲಯುತವಾಗಿದ್ದರೆ ಕೇಂದ್ರ ಬಲಯುತ ವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಅದರಲ್ಲಿ ಹೇಳಿದ್ದಾರೆ. ಈ ಪುಸ್ತಕವನ್ನು ಪಬ್ಲಿಷ್ ಮಾಡು ವುದಕ್ಕೆ Lakhs and lakhs of rupees for each edition has been spent. ಈ ಪುಸ್ತಕವನ್ನು ಕಡಿಮೆ ಸಂಖ್ಯೆಯಲ್ಲಿ ಮುದ್ರಿಸಿಲ್ಲ. ಎಲ್ಲಾ ಮೆಂಬರ್ಸ್ ಆಫ್ ದಿ ಲೆಜಿಸ್ಲೇಚರ್ಸ್, ಎಲ್ಲಾ ಎಂ.ಪಿ.ಗಳಿಗೂ. ಇಡೀ ದೇಶಕ್ಕೆ ಕಳುಹಿಸಿದ್ದಾರೆ. ಇದು ರಾಮಕೃಷ್ಣ ಹೆಗಡೆಯವರ ಪ್ರಭಾವ. ಬಡ ಬೋರೇಗೌಡನ ದುಡ್ಡನ್ನು ಈ ಪುಸ್ತಕಗಳ ಪ್ರಿಂಟ್ ಮಾಡುವುದಕ್ಕೆ ಹಾಕಿದ್ದಾರೆ. ಈ ರೀತಿ ಹಣ ಕೊಟ್ಟರೆ ಅಭಿವೃದ್ಧಿ ಕೆಲಸಗಳಿಗೆ ಎಲ್ಲಿಂದ ಹಣ ಬರುತ್ತದೆ? ಈ ಪುಸ್ತಕಗಳನ್ನೆಲ್ಲಾ ಕರ್ನಾಟಕ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ನವರು ಪ್ರಿಂಟ್ ಹಾಕಿಸಿದ್ದಾರೆ. ಈ ಪುಸ್ತಕ ಗಳನ್ನು ಇಡೀ ದೇಶಕ್ಕೆಲ್ಲಾ ಹೊರಟುಹೋಗಿವೆ. ಇವರ ಪ್ರಚಾರ ಮಟ್ಟ ಎಲ್ಲಿಗೆ ಹೋಗಿದೆ ಎಂದರೆ, ಹಿಂದಿ ಭಾಷೆಯ ಪುಸ್ತಕಗಳಲ್ಲೂ ಪ್ರಿಂಟ್ ಹಾಕಿಸಿದ್ದಾರೆ. ಈ ಪುಸ್ತಕವನ್ನು ಸಹ ಗೌರ್ನಮೆಂಟ್ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ನವರು ಪ್ರಿಂಟ್ ಹಾಕಿಸಿದ್ದಾರೆ. ನನಗೆ ಹಿಂದಿ ಸರಿಯಾಗಿ ಓದುವುದಕ್ಕೆ ಬರುವುದಿಲ್ಲ ಆದರೂ ಓದುತ್ತೇನೆ. ಹಿಂದಿಯಲ್ಲಿ ಈ ತರಹ ಇದೆ. 'ಕರ್ನಾಟಕ್ ಮೆ ಅನುಸೂಚಿತ ಜಾತಿಯೋ ಔರ್ ಅಲ್ಪಸಂಖ್ಯಾತ ವರ್ಗೋಂಕೋ ಕಲ್ಯಾಣ್ ಕಾರ್ಯ' ಎಂದು ಹೇಳ ಲಾಗಿದೆ. ಈ ಪುಸ್ತಕಗಳು ಇಡೀ ದೇಶಕ್ಕೆ ಸಪ್ಲೈ ಮಾಡಿದ್ದಾರೆ. ಉತ್ತರ ಪ್ರದೇಶಗಳ ಕಡೆ ಇರುವ ರಾಜ್ಯಗಳ ಜನರು ಹಿಂದಿಯನ್ನೇ ಮಾತನಾಡುವುದರಿಂದ ಅವರಿಗೂ ಇವರ ವಿಚಾರಗಳು ಗೊತ್ತಾಗ ಬೇಕು. ಅದಕ್ಕೋಸ್ಕರ ಇವರು ಹಿಂದಿ ಪುಸ್ತಕಗಳಲ್ಲೂ ಇವರು ತಮ್ಮ ಪ್ರಚಾರವನ್ನು ಮಾಡಿಸಿ ಕೊಂಡಿದ್ದಾರೆ. ಆ ಕಡೆ ಜನಕ್ಕೆ ಇಂಗ್ಲೀಷ್ ಚೆನ್ನಾಗಿ ಬರುವುದಿಲ್ಲ. ಇಂಗ್ಲೀಷ್ ಮಾತನಾಡುವುದಕ್ಕೆ ದಕ್ಷಿಣ ಇಂಡಿಯಾದವರೇ ವಾಸಿ ಎಂದು ಹೇಳಬಹುದು. ಇವರು ಏನು ಸಾಧನೆ ಮಾಡಿದ್ದಾರೆ, ಜನತಾ ಪಕ್ಷ ಏನು ಮಾಡಿದೆ ಎಂಬ ಉವಾಚ ಎಲ್ಲಾ ಇಡೀ ದೇಶಕ್ಕೆ ತಿಳಿಸಬೇಕು. ಅದಕ್ಕಾಗಿ ಹಣ ಖರ್ಚು ಮಾಡಿ ಪ್ರಚಾರ ಮಾಡಿದ್ದಾರೆ. Welfare of Scheduled Castes and Scheduled Tribes and minorities ಬಗ್ಗೆ ಹಿಂದಿಯಲ್ಲೂ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ಪ್ರಚಾರ ಮಾಡಿದ್ದಾರೆ. ಹಾಗೆ ವಿಷಯವನ್ನು ಪುನಃ ಇಂಗ್ಲೀಷ್‌ನಲ್ಲಿ ಪ್ರಿಂಟ್ ಮಾಡಿಸಿದ್ದಾರೆ. ಈ ಪುಸ್ತಕಗಳನ್ನೂ ಗೌರ್ನಮೆಂಟ್ ಆಫ್ ಕರ್ನಾಟಕದ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ನವರು ಪ್ರಿಂಟ್ ಮಾಡಿಸಿದ್ದಾರೆ. ಇನ್ನೊಂದು ಪುಸ್ತಕದಲ್ಲಿ ಪ್ಲಾನಿಂಗ್ ಬಗ್ಗೆ ಹೇಳಿದ್ದಾರೆ. ಪ್ಲಾನಿಂಗ್ ವ್ಯವಸ್ಥೆ ಹೇಗೆ ಇರಬೇಕು ಯಾವ ರೀತಿ ಇರಬೇಕು ಎಂಬುದನ್ನೆಲ್ಲಾ ಹೇಳಿದ್ದಾರೆ. ಹೇಳಲಿ, ನಾನು ಬೇಡ ಎನ್ನುವುದಿಲ್ಲ. ಅಭಿಪ್ರಾಯ ಇರಬೇಕು. ಆದರೆ ಅದನ್ನು ಇಡೀ ದೇಶಕ್ಕೆ ಪುಸ್ತಕಗಳ ರೂಪದಲ್ಲಿ ತಯಾರು ಮಾಡಿ ಸಪ್ಲೈ ಮಾಡಿದ್ದಾರೆ. ಒಂದು ರಾಜ್ಯಕ್ಕಲ್ಲ, ಇಡೀ ದೇಶಕ್ಕೆ ಸಪ್ಲೈ ಮಾಡಿದ್ದಾರೆ.

'Karnataka's War on drougnt-1985-86'

ನಾನು ಪುನಃ ಹೇಳಲಿಕ್ಕೆ ಹೋಗುವುದಿಲ್ಲ. 'A now deal for better classes in Karnataka'

ಆ ಮೇಲೆ ಇದು ಬರಗಾಲ ಪ್ರದೇಶಗಳಿಗೆ ಪ್ರಧಾನಿಯವರ ಭೇಟಿಗೆ ಪ್ರತಿಕ್ರಿಯೆ ಇದು ಕನ್ನಡದಲ್ಲಿಯೂ, ಇಂಗ್ಲೀಷ್‌ನಲ್ಲಿಯೂ ಕೂಡ ಇದೆ. ಈ ಪ್ರತಿಗಳನ್ನು ಇಡೀ ದೇಶದ ಎಲ್ಲಾ ಕಡೆಗಳಲ್ಲಿ ಕೂಡ ಕಳುಹಿಸಿಕೊಟ್ಟಿದ್ದಾರೆ. ಪ್ರಧಾನಿಯವರ ವಿಚಾರ ದೇಶಕ್ಕೆಲ್ಲಾ ಕಳುಹಿಸಿಕೊಡಬೇಕು ಎಂದು ಇರಬಹುದು ಆಮೇಲೆ 'The Mandate and the Media' again published by Karnataka Information Department.' ಇದನ್ನು ಇಂಗ್ಲೀಷ್‌ನಲ್ಲಿ ಮಾಡಿದರು. ಅದರಲ್ಲಿ ಏನು ಇದೆ ಎಂದರೆ, ಯಾವ ಯಾವ ಪತ್ರಿಕೆಗಳವರು ಏನು ಏನು ಅಭಿಪ್ರಾಯವನ್ನು ಇವರ ಬಗ್ಗೆ ಪಟ್ಟಿದ್ದಾರೆ, ಎಂದು ಇದನ್ನು ಮಾಡಿ ಇಡೀ ದೇಶಕ್ಕೆ ಕೊಟ್ಟರು. ನಾನು ದೆಹಲಿಗೆ ಹೋಗಿದ್ದಾಗ ನನ್ನ ಅನೇಕ ಜನ ಅಲ್ಲಿನ ಮಾನ್ಯ ಪಾರ್ಲಿಮೆಂಟ್ ಸದಸ್ಯರು ಕೇಳಿದರು. ಬಿಹಾರ್, ಎಂ. ಪಿ. ಮೊದಲಾದ ಕಡೆಯವರು ನನ್ನ ಸ್ನೇಹಿತರು ಕರ್ನಾಟಕದಲ್ಲಿ ಪ್ರಚಾರ ಪುಸ್ತಕಗಳ ಬಗ್ಗೆ ಎಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದೀರಿ ಕೇಳಿದರು. ನಾನು ಇಲ್ಲಿಗೆ ಬಂದಮೇಲೆ, ಅಪ್ಪೂ ಪುಸ್ತಕಗಳ ಲಿಸ್ಟ್ ತರಿಸಿಕೊಂಡು ಪುಸ್ತಕಗಳನ್ನು ತೆಗೆದುಕೊಂಡಿದ್ದೇನೆ. ರಾಶಿ ರಾಶಿ ಬಿದ್ದಿದೆ. ಹಿಂದೆ ಕೂಡ ಕನ್ನಡ ಪುಸ್ತಕಗಳನ್ನು ಸಿಂಗ್‌ಪೂರ್‌ದಲ್ಲಿ ಪ್ರಕಟಮಾಡಿಸಿದ್ದರು. ಚೆಲುವ ಕನ್ನಡ ನಾಡು ಎಂಬ ಪುಸ್ತಕ ಎಂದು ಕಾಣುತ್ತದೆ. ಅದನ್ನು ಪರದೇಶದಲ್ಲಿ ಪ್ರಿಂಟ್ ಮಾಡಿದ ಬಗ್ಗೆ ಸದಸ್ಯರಾದ ಉಮರಬ್ಬನವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದರು.

ಶ್ರೀ ಜಿ. ನಾರಾಯಣ ಕುಮಾರ್.—ಆಗಲೇ ತಾವುಗಳು ಶಿವರಾಮ ಕಾರಾಂತರ ಬಗ್ಗೆ......... ಮನೆ ಹಾಳು ಹೇಳಿದಿರಲ್ಲ......ಅಂದು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಗಂಭೀರವಾಗಿ ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅದು ಹಿಂದೆಯೂ ಕೂಡ ಸದನದಲ್ಲಿ ಪ್ರಸ್ತಾಪವಾಗಿದೆ. ಇವುಗಳು ಇಡೀ ರಾಷ್ಟ್ರದಲ್ಲಿಯೇ ಇರಬೇಕೆಂದು ಕಳುಹಿಸಿಕೊಟ್ಟಿದ್ದಾರೆ. ಅಷ್ಟಕ್ಕೆ ತೃಪ್ತರಾಗಲಿಲ್ಲ ಇವರು ಏಕೆಂದರೆ ಇವರ ಅನುಭವ ಬಹಳ ವರ್ಷದ ಅನುಭವ. ಅದು ಅನೇಕ ಇಲಾಖೆಗಳಲ್ಲಿ ಕೂಡ ಒಳಗೊಂಡಿರ ಬೇಕಲ್ಲ, ಅದಕ್ಕೋಸ್ಕರವಾಗಿ Judiciary to-day Disturbing trends and suggestions for reforms' ಒಂದುಸಾರಿ ಸದನದಲ್ಲಿ ಇದು ಪ್ರಸ್ತಾಪಕ್ಕೆ ಬಂತು. ಇಲ್ಲಿ ಲಾಯರ್ಸ್ ಕಾನ್ಫರೆನ್ಸ್ ವಿಧಾನಸೌಧದ ಸಭಾಂಗಣದಲ್ಲಿ ನಡೆಯಿತು ಆವಾಗ ಬಂತು. ಆಗ ಒಂದು ಹೇಳಿಕೆ ಕೊಟ್ಟರು. ಜುಡಿಶಿಯರಿಯವರಸ್ಯಾಲರಿ ಮತ್ತಿತರ ಸೌಲಭ್ಯಗಳ ಬಗ್ಗೆ ನಾನು ಮಾತನಾಡು ವುದಿಲ್ಲ. ಕೇಂದ್ರ ಸರಕಾರದವರು ಮಾಡಿದ್ದಾರೆ, ಪಾರ್ಲಿಮೆಂಟ್ ಅಪ್ರೂವ್ ಮಾಡಿದೆ, ಅದರ ಬಗ್ಗೆ ಮಾತನಾಡುವುದಿಲ್ಲ. ಈ ಜ್ಯೂಡಿಶಿಯರಿ ವಿಚಾರದಲ್ಲಿ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಹೈಕೋರ್ಟಿನವರು, ಸುಪ್ರೀಂ ಕೋರ್ಟ್‌ನವರು ಕೇಳದಿದ್ದರೂ ಕೂಡ ಅಭಿಪ್ರಾಯ ವ್ಯಕ್ತಪಡಿಸಲಿಕ್ಕೆ ಬೇಕು ಅಲ್ಲಿರತಕ್ಕಂಥ ಜಸ್ಟಿಸ್, ಮತ್ತಿತರರು ಎಲ್ಲರೂ ಇದರ ಬಗ್ಗೆ ಖುಷಿಯಾಗಿ, ಇವರು ಇಷ್ಟೊಂದು ಕರುಣೆ ಉಳ್ಳವರು, ಕಕ್ಕುಲಾತಿ ಉಳ್ಳವರು, ಅನುಕಂಪ ಉಳ್ಳವರು ಎಂದು ಹೇಳಬೇಕು. ಕೇಸ್ ಯಾವುದೇ ರೀತಿಯಲ್ಲಿ ಇರಬಹುದು, ಅದು ಈಗ ಕೋರ್ಟಿನಲ್ಲಿರತಕ್ಕಂಥ ವಿಚಾರ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಎಂ. ರಘುಪತಿ.—ಅದಕ್ಕೆ ನಾವು ಬೇಡ ಎಂದು ಹೇಳುವುದು.........

ಶ್ರೀ ಎಸ್. ಬಂಗಾರಪ್ಪ.—ಕೋರ್ಟಿನಲ್ಲಿರುವುದು ಸಬ್‌ಜ್ಯುಡೀಸ್ ಆಗುತ್ತದೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ.........

ಅಧ್ಯಕ್ಷರು.—ಇನ್ನು ಐದು ನಿಮಿಷ ಇದೆ. ತಾವು ಮುಕ್ತಾಯ ಮಾಡಿ......

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಮತ್ತೊಂದು ಪುಸ್ತಕ ಇದೆ. ಇದು ಲೆಕ್ಕ ಅಲ್ಲ. ಇದನ್ನು ಬರೆದವರು ರಾಮಕೃಷ್ಣ ಹೆಗಡೆಯವರು. ಇವೊತ್ತು ಸ್ವಂತವಾಗಿ ಯಾರಾದರೂ ಪುಸ್ತಕವನ್ನು ಬರೆದರೆ, ಪ್ರಕಟಣೆಯನ್ನು ಕೂಡ ಅವರ ಸ್ವಂತ ಖರ್ಚಿನಿಂದಲೇ ಮಾಡಬೇಕು. ಕರ್ನಾಟಕ ಗವರ್ನಮೆಂಟ್‌ನಿಂದ ಮಾಡತಕ್ಕದಲ್ಲ. ಸರ್ಕಾರದ ಹಣವನ್ನು ನೀವು ಹೇಗೆ ಲೂಟಿ ಮಾಡಿದ್ದೀರಿ ಎಂದು

ನಾನು ಹೇಳುತ್ತೇನೆ. ಇಲ್ಲಿ ಬಹಳ ಒಳ್ಳೆಯ ಸಬ್ಜೆಕ್ಟ್ಸ್ ಇವೆ. Janatha period 1983-85 Judiciary to-day, correspondences, international legal opinion...... ಇದರ ಬಗ್ಗೆ ವ್ಯಾಖ್ಯಾನ ಬಂದಿವೆ. ಇವರಿಗೆ ಪ್ರಾಯಶಃ ಟೈಂ ಎಲ್ಲಿ ಸಿಕ್ಕಿತೋ ಗೊತ್ತಿಲ್ಲ. ಇವರು ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಗಳಿದ್ದಾಗ ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ ಒಂದು ಪುಸ್ತಕ ಬರೆಯಲೂ ಪಾಪ ಇವರಿಗೆ ಟೈಂ ಸಿಕ್ಕಿರಲಿಲ್ಲ. ಈಗ ಅದು ಹೇಗೆ ಇಷ್ಟು ಸಮಯ ಸಿಕ್ಕಿತೋ ದೇವರಿಗೇ ಗೊತ್ತು ? ರಾತ್ರಿಯಿಡೀ ಬರೆಯುತ್ತಾರೆಯೋ ? ಇವರು ಆಡಳಿತ ನಡೆಸುವುದು ಯಾವಾಗ ? ಈ ಹಣವನ್ನು ನಿರ್ವಾಣವಾಗಿ ಬೊಕ್ಕಸದಿಂದ ಖರ್ಚುಮಾಡಿ ನಿಮ್ಮ ಪ್ರಚಾರ ಪ್ರಿಯತೆ ಮೇರುಶಿಖರ ಮುಟ್ಟಬೇಕು. ಅದಕ್ಕೋಸ್ಕರ ಹಣ ಖರ್ಚು ಮಾಡಿದ್ದೀರಿ. ನೀವು ಅಭ್ಯಾಸಮಾಡಿ ಪುಸ್ತಕ ಬರೆದಿದ್ದರೆ ನನ್ನ ಅಭ್ಯಂತರವಿಲ್ಲ. ಆದರೆ ಈ ಪುಸ್ತಕ ನೋಡಿದರೆ ನೀವು ಬರೆದಿಲ್ಲವೆಂಬ ಅನುಮಾನ ನನಗೆ ಬರುತ್ತದೆ. ಇಂತಹ ವ್ಯಾಖ್ಯಾನ ಎಷ್ಟೋ ಸಲ ಸಬ್ಜೆಕ್ಟ್ ಎಕ್ಸ್‌ಪರ್ಟ್‌ಗಳಿಗೂ ಸಾಧ್ಯವಿಲ್ಲ. ಏನೇ ಇರಲಿ, ರಾಜ್ಯದ ಬೊಕ್ಕಸದ ಹಣವನ್ನು ಹೀಗೆ ಖರ್ಚು ಮಾಡಬಹುದೇ ಎಂದು ಕೇಳುತ್ತಾ, ಇನ್ನು ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ. ಕೊನೆಯಲ್ಲಿ ಒಂದೇ ಒಂದು ಹೇಳುತ್ತೇನೆ. ಆನ್‌ಲುಕರ್‌ನಲ್ಲಿ ಮ್ಯಾಗಜೀನ್ ಒಂದು ವ್ಯಾಖ್ಯಾನ ಬರೆದಿದ್ದಾರೆ.

'How Hegde Cuitivates The press'

"Hegde courted pressmen on a personal level too. The Bangalore Press Club got a face-gift after he visited it once and clipping service was started within its premises. Dinners were hosted for organised groups of journalists such as the Reporters Guild and, to some of these, respective families too were invited. The PTI and UNI were allotted sites at the intervention of the chief minister and Individual pressmen with specific problems found their problems attended to. Outside the state. Hegde took care to see that Karnataka Government aid was made available to press clubs of metropolitan cities as advertisements etc.,

But all this notwithstanding, Hegde may not have succeeded had he not been his own best PR man. Talking flippantly of his youthful days with Gentleman, he admits that he has always enjoyed being gallant and achivalrous. If Hegde has been accused of wild doses of wine, woman and song in his early years, there is none of it now. Says N. Sathyanarayana. Chief reporter, Kannada Prabha, "Hegde has given local Journalists no reason to attack him personally."

However, Link in its cover page article 'How Clean is Mr. Clean ? indicats Hegde for his continued association with the liquor lobby in the state. Says Link........."Hegde's dealing with the liquor lobby is not recent. As excise minister in Nijalingappa's cabinet, he was a vocal proponent for repealing of prohibition in Karnataka in 1966. Later, holding the same portfolio in Veerendra Patil,s cabinet, he had

been involved inthe Bhooma Reddy case which concerned grant of toddy vending licence to one contractor only, against which the supreme court has passed strictures."

ಅಧ್ಯಕ್ಷರು.—ನಿಮಗೆ ಮ್ಯಾಕ್ಸಿಮಮ್ ಟೈಂ ಕೊಟ್ಟಿದ್ದೇನೆ ತಾವು ಆದಷ್ಟು ಬೇಗ ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಆದಷ್ಟು ಬೇಗ ಮುಗಿಸುತ್ತೇನೆ. ಸಂಪೂರ್ಣವಾಗಿ ಮಂತ್ರಿ ಮಂಡಲವನ್ನು ರಚನೆ ಮಾಡುವುದಕ್ಕೆ ನಿಮ್ಮ ಹಣೆಬರಹದಲ್ಲಿ ಆಗಿಲ್ಲ. ರಾಜ್ಯದ ಕೆಲಸಗಳನ್ನು ಮಾಡುವುದಕ್ಕೆ ನಿಮ್ಮ ಹಣೆಬರಹದಲ್ಲಿ ಆಗಲ್ಲ. ಹಲವಾರು ವಿಚಾರದಲ್ಲಿ ವಿಫಲರಾಗಿದ್ದೀರಿ.

(ಗೊಂದಲ)

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ........

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಒಂದು ಹೊಸ ಪ್ರಯೋಗವನ್ನು ಮಾಡಿ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತುಗಳ ಚುನಾವಣೆಯನ್ನು ನಡೆಸಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನೀವು ಆ ರೀತಿ ಸದಸ್ಯರಿಗೆ ಹೇಳಬಾರದು. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮೊಲು ಅವರನ್ನು ಕುಳಿತುಕೊಳ್ಳಲು ತಿಳಿಸಿರಿ.

(ಗೊಂದಲ)

ಅಧ್ಯಕ್ಷರು.—ನಾನು ವೆಂಕಟರಾಮಯ್ಯನವರನ್ನು ಕರೆದಿದ್ದೇನೆ, ನೀವುಯಾರು ಏನು ಮಾತನಾಡಿದರು ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ.........

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವು ಕೂಡ ಸ್ವಲ್ಪ ಮಟ್ಟಿಗೆ ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ, ನೀವು ಅಲೋ ಮಾಡದಿದ್ದರೆ........

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸಂಪೂರ್ಣವಾದ ಮಂತ್ರಿ ಮಂಡಲವನ್ನು ಮಾಡಿಲ್ಲ ಇದ್ದ ಮಂತ್ರಿಗಳಲ್ಲಿ ಕೆಲವರನ್ನು ಕೈ ಬಿಟ್ಟರು, ಎಲೆಕ್ಷನ್ ಆದ ಮೇಲೆ ತೆಗೆದುಕೊಳ್ಳುತ್ತೇವೆಂದು ಹೇಳಿದರು, ಎಲೆಕ್ಷನ್ ಆದಮೇಲೆ ತೆಗೆದುಕೊಂಡಿಲ್ಲ, ರಾಜ್ಯದ ಕೆಲಸಗಳನ್ನು ಹಾಗೆಯೇ ಇಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನಿಮ್ಮ ಭಾಷಣವನ್ನು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ರಾಜ್ಯದ ಸಮಸ್ಯೆಗಳನ್ನು ಬಗೆಹರಿಸುವರಲ್ಲಿ ವಿಫಲರಾಗಿದ್ದೀರಿ, ಅದನ್ನು ಬಗೆಹರಿಸಲಿಕ್ಕೆ ನಿಮ್ಮ ಕೈಯಲ್ಲಿ ಆಗಿಲ್ಲ, ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ವೆಂಕಟರಾಮಯ್ಯನವರೇ ತಾವು ಪ್ರಾರಂಭಮಾಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಡೆಪ್ಯುಟಿ ಸ್ಪೀಕರ್‌ರವರೇ ನಾನು ಆ ರೀತಿ ಹೇಳಿಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನಾನು ರೆಕಾರ್ಡ್ ತರಿಸಿ ನೋಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ,.........

(ಗೊಂದಲ)

ಶ್ರೀ ರಾಜವರ್ಧನ್.—ಅಧ್ಯಕ್ಷರೇ.........

(ಗೊಂದಲ)

ಅಧ್ಯಕ್ಷರು.—ಈಗ ತರಿಸಿ ನೋಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ವೆಂಕಟರಾಮಯ್ಯನವರೇ ತಾವು ಮಾತನಾಡಿ.

†ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ನಿಜವಾಗಿಯೂ ಕೂಡಾ ಬಹಳ ಸೈದ್ಧಾಂತಿಕ ಪದವನ್ನು ಬಳಸಿ ಮಾನ್ಯ ಪ್ರಕಾಶ್‌ರವರು ಮಾತನಾಡಿದರು. ರಾಮಯ್ಯನವರೂ ಕೂಡಾ ಅದನ್ನು ಅನುಮೋದಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಒಂದು ವಿಷಯ ಮರೆತು ಹೋಗಿತ್ತು. ರಾಜ್ಯಪಾಲರ ಭಾಷಣದ ಬಗ್ಗೆ ನಾವು ಅಂದುಕೊಂಡಿರುವುದು ಅದು ಒಂದು ಪಾಲಿಸಿ ಸ್ಟೇಟ್‌ಮೆಂಟ್ ಆಗಿರುತ್ತದೆ. ಇದರ ಬಗ್ಗೆ ಹೊಸ ನೀತಿ ಏನು ಇದೆ, ಹೊಸ ನಿರೂಪಣೆ ಏನು ಇದೆ, ಇದರ ಬಗ್ಗೆ ಒಂದು ಹೇಳಿಕೆಯಾಗಿರುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಡೆಪ್ಯುಟಿ ಸ್ಪೀಕರ್‌ರವರು ಹೇಳಿದರೂ ಕೂಡಾ.........

(ಗೊಂದಲ)

MR. SPEAKAR.—I have been convinced that the hon. Member has not nsed that word.

(INTERRUPTIONS)

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ದುರಾದೃಷ್ಟವಶಾತ್ ಈ ರಾಜ್ಯಪಾಲರ ಭಾಷಣವನ್ನು ನಾವು ನೋಡುವಾಗ ಅದು ಬಹಳ ನೀರಸ ಭಾಷಣವಾಗಿತ್ತು. ನಿಜವಾಗಿಯೂ ಕೂಡ ಬಹಳ ಔಪಚಾರಿಕವಾದ ಭಾಷಣವಾಗಿತ್ತು. ನಾವು ಮುಂದೆ ಏನು ಮಾಡಬೇಕು, ಹೊಸನೀತಿ ಏನೂ ಇದರ ಬಗ್ಗೆ ಪ್ರಸ್ತಾಪ ಇರಲಿಲ್ಲ. ನಾನು ಅಂದುಕೊಂಡೆ, ಎಲೆಕ್ಷನ್ ಆದಮೇಲೆ ಮಾನ್ಯ ಮುಖ್ಯಮಂತ್ರಿಯವರು ಹೆಚ್ಚಾಗಿ ಗಮನ ಕೊಡುವುದಕ್ಕೆ ಸಾಧ್ಯವಾಗದೇ ಇಂಥ ಒಂದು ರಾಜ್ಯಪಾಲರ ಭಾಷಣವನ್ನು ಹೇಳಿಸಿದರು ಎಂದು ನನಗನ್ನಿಸುತ್ತದೆ. ಇದರ ಬಗ್ಗೆ ಪ್ರಜಾವಾಣಿ ಪೇಪರ್‌ನಲ್ಲಿ ಎಡಿಟೋರಿಯಲ್ ಕಾಲಂನಲ್ಲಿ ಬಂತು. ೩೧ನೇ ಜನವರಿ ೮೦ ರಲ್ಲಿ "ಕರ್ನಾಟಕದ ರಾಜ್ಯಪಾಲ ಎ. ಎನ್. ಬ್ಯಾನರ್ಜಿ ಅವರು ರಾಜ್ಯ ವಿಧಾನಮಂಡಲದಲ್ಲಿ ಜಂಟೀ ಅಧಿವೇಶನದಲ್ಲಿ ಮಾಡಿದ ಭಾಷಣ ಕೇವಲ ಸಾಂಪ್ರದಾಯಿಕ ಅಗತ್ಯವೊಂದನ್ನು ಪೂರೈಸುವುದಕ್ಕಿಂತ ಹೆಚ್ಚಿನ ಉದ್ದೇಶ ಇರಲಿಲ್ಲ" ಎಂದು ಒಂದು ಕಾಮೆಂಟ್ ಮಾಡಿರುತ್ತಾರೆ. ಕನ್ನಡಪ್ರಭ ಪತ್ರಿಕೆಯಲ್ಲಿ ಜಾಸ್ತಿ ಹೊಗಳಿದ್ದಾರೆ. ನಾಲ್ಕೈದು ವಾಕ್ಯಗಳು ಮಾತ್ರ ಸ್ವಲ್ಪ ಕ್ರಿಟಿಕಲ್ ಆಗಿದೆ. ಕನ್ನಡ ಪ್ರಭದಲ್ಲಿ ಬಹಳ ಜಾಸ್ತಿ ಹೊಗಳಿದ್ದಾರೆ. ಅದು ನನ್ನ ಹತ್ತಿರ ಇದೆ. ಎಲ್ಲಾ ಪತ್ರಿಕೆಗಳನ್ನು ಈ ಬಗ್ಗೆ ಕಲೆಕ್ಟ್ ಮಾಡಿದ್ದೇನೆ. ಮಾನ್ಯ ಜಾಲಪ್ಪ ಅವರು ಹೇಳಿದುದ್ದು ಸರಿ. ಕನ್ನಡಪ್ರಭ ಪತ್ರಿಕೆಯಲ್ಲಿ ಜಾಸ್ತಿ ಹೊಗಳಿದ್ದಾರೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ವಿಜಯವಾಡ ಅಖಿಲಭಾರತ ವಿರೋಧಪಾರ್ಟಿಗಳ ಒಂದು ಸಮ್ಮೇಳನದಲ್ಲಿ ಸೇರಿದ್ದರು. ಅವರು ಏನು ನಿಲುವು ತೆಗೆದುಕೊಂಡಿದ್ದಾರೆ ಎನ್ನುವುದು ಅದರಲ್ಲಿ ಸ್ಪಷ್ಟವಾಗಿದೆ. ಕೇಂದ್ರ ಸರ್ಕಾರದಿಂದ ನಮಗೆ ಸರಿಯಾಗಿ ಗ್ರಾಂಟ್ ಕೊಡುತ್ತಾ ಇಲ್ಲ. ಆದುದರಿಂದ ನಮಗೆ ತುಂಬಾ ತೊಂದರೆಯಾಗಿದೆ. ಇದರಿಂದ ನಮ್ಮ ದೇಶದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗಿದೆ. ನಿನ್ನೆಯ ದಿವಸ ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ಪೂರ್ತಿಯಾಗಿ ಹೇಳಿದ್ದಾರೆ. ನಮಗೆ ಕೇಂದ್ರ ಸರ್ಕಾರದಿಂದ ಏನು ಗ್ರಾಂಟ್ ಬರಬೇಕೋ ಅವೆಲ್ಲವೂ ಬರುತ್ತಾ ಇಲ್ಲ ಎಂದು ನಿನ್ನೆ ದಿವಸವೂ ಎಲಾಬರೇಟ್ ಆಗಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ರಾಜ್ಯಪಾಲರ ಭಾಷಣದಲ್ಲಿ ಈ ಮಾತನ್ನು ಹೇಳಿಸಬಹುದಾಗಿತ್ತು. ಆ ರೀತಿ ಮಾಡಿಲ್ಲ. ಆದರೆ ಈ ರಾಜ್ಯಪಾಲರ ಭಾಷಣದಲ್ಲಿ ಬರಗಾಲದ ಬಗ್ಗೆ ಕಾನ್‌ಸೆಂಟ್ರೇಟ್ ಮಾಡಿ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ೧೦೦ಕ್ಕೆ ೮೦ ಪರ್ಸೆಂಟ್ ಇರತಕ್ಕಂಥ ಕೃಷಿ ಕಾರ್ಮಿಕರು ಏನು ಇದ್ದಾರೆ ಅವರ ಬಗ್ಗೆ ಇದರಲ್ಲಿ ಒಂದು ಮಾತೂ ಹೇಳಿಲ್ಲ. ಬರೀ ಬರಗಾಲದ ಬಗ್ಗೆ ಮಾತನಾಡಿದ್ದಾರೆಯೇ ವಿನಹ ಇದಕ್ಕೆ ಶಾಶ್ವತವಾದ ಪರಿಹಾರ ಕಾರ್ಯಕ್ರಮ ಏನು ತೆಗೆದುಕೊಂಡಿದ್ದಾರೆ ಎನ್ನುವುದು ಇಲ್ಲ. ಇಡೀ ದೇಶದಲ್ಲಿ ನಮ್ಮ ರಾಜ್ಯ ಎರಡನೆಯ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ ಕಡೆಯಲ್ಲಿ ರಾಜಸ್ಥಾನ ಎಂದು ಇದೆ ಅದಾದಮೇಲೆ ನಮ್ಮ ಕರ್ನಾಟಕ ಬರುತ್ತದೆ. ನಮ್ಮ ಕರ್ನಾಟಕದಲ್ಲಿ ೧೫ ಪರ್ಸೆಂಟ್ ಕೂಡ ನೀರಾವರಿ ಇಲ್ಲ. ರಾಜಾಸ್ಥಾನದಲ್ಲಿ ಇಂದಿರಾ ಗಾಂಧಿಯವರು ಅಲ್ಲಿ ಯೋಜನೆಗಳನ್ನು ಕಂಪ್ಲೀಟ್ ಮಾಡಿದ್ದರಿಂದ ಅದು ನಮ್ಮನ್ನೂ ದಾಟಿ ಮುಂದಕ್ಕೆ ಹೋಗುತ್ತದೆ. ಆದರೆ ನಮ್ಮ ಕರ್ನಾಟಕದಲ್ಲಿ ಎಲ್ಲಾ ನೀರಾವರಿ ಪ್ರದೇಶ ಆಗಬೇಕು ಎನ್ನುವುದರ ಬಗ್ಗೆ ಇಂಪ್ರೂವ್ ಮಾಡುವುದಕ್ಕೆ ಹೋಗಲಿಲ್ಲ. ನಾನು ಈ ರಾಜ್ಯಪಾಲರ ಭಾಷಣ ಏನು ಇದೆ ಎನ್ನುವುದನ್ನು ಪೂರ್ತಿಯಾಗಿ ನೋಡಿದೆ. ನಮ್ಮ ದೇಶದ ಕೃಷಿ ಕಾರ್ಮಿಕರ ಬಗ್ಗೆ ಬಡ ರೈತರ ಬಗ್ಗೆ ಏನು ಅನುಕೂಲತೆ ಕೊಟ್ಟಿದ್ದಾರೆ ಎನ್ನುವುದನ್ನು ಅದರಲ್ಲಿ ಏನೂ ಹೇಳಿಲ್ಲ.

ಭೂಸುಧಾರಣೆ ಬಗ್ಗೆ ನೋಡಿದಾಗ ಈ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತೂ ಹೇಳಿಲ್ಲ. ಒಂದೇ ಒಂದು ಮಾತು ಹೇಳುವುದಾದರೆ ಅವರು ಏನಾದರೂ ಮಾಡಲಿ ನಮ್ಮ ಇಂಡಿಯಾ ದೇಶದಲ್ಲಿ ಮುಖ್ಯವಾಗಿ ನಮ್ಮದೇಶದಲ್ಲಿ ಸ್ವಲ್ಪಮಟ್ಟಿಗೆ ಸ್ಟ್ರಕ್ಚರಲ್ ಛೇಂಜಸ್ ಆಗಿದೆ. ಬಡವರು ಪಾರ್ಟಿಸಿಪೇಟ್ ಮಾಡುವಂಥಾದಾಗಿದೆ ಮುಖ್ಯವಾಗಿ ಈ ಡೆಮಾಕ್ರಟಿಕ್ ಸೆಟ್ ಅಪ್‌ನಲ್ಲಿ ಎಲ್ಲರೂ ಕೂಡ ಭಾಗವಹಿಸುವ ಶಕ್ತಿ ಇನ್ನೂ ಬರಬೇಕು. ಆ ಜನರೆಲ್ಲರಿಗೂ ಓಟು ಕೊಡುವ ಶಕ್ತಿ ಇರುವ ಹಾಗೆ ಮಾಡಬೇಕು. ಹಾಗೇನಾದರೂ ಛೇಂಜಸ್ ಮಾಡಿದರೆ ಒಳ್ಳೆಯದು. ಇದರ ಬಗ್ಗೆ ನಿನ್ನೆ ದಿವಸದ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಶ್ರೀ ವಿ. ಎನ್. ಸುಬ್ಬರಾವ್ ಅವರು ಒಂದು ಆರ್ಟಿಕಲ್ ಬರೆದಿದ್ದಾರೆ. ರೀಸೆಂಟ್ ಆಗಿ ನಮ್ಮ ಕರ್ನಾಟಕದಲ್ಲಿ ಏನು ಛೇಂಜಸ್ ಆಗಿದೆ ಎನ್ನುವುದರ ಬಗ್ಗೆ ಬರೆದಿದ್ದಾರೆ. ಅದರಲ್ಲಿರುವ ಎರಡು ವಾಕ್ಯವನ್ನು ತಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಅದು ಈರೀತಿ ಇದೆ :—

"**Alva's Charge**: At the executive committee of the Janata party on Saturday, the young former Minister, Dr. Jeevaraj Alva, whose closeness to Mr. Hegde is well known, took off against the party presdent,

Mr. M. Chandasheker and one of the party general Secretaries, Mr. Shankar, whose closeness to public works Minister, H. D. Deve Gowda is also well known......

ಶ್ರೀ ಆರ್. ಜಾಲಪ್ಪ.—ಅದೆಲ್ಲಾ ಏತಕ್ಕೆ ಓದುತ್ತೀರಿ ?

ಶ್ರೀ ಆರ್. ವೆಂಕಟರಾಮಯ್ಯ.—ಪೂರ್ತಿ ಓದುತ್ತೇನೆ. ಸ್ವಲ್ಪ ಕೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬಂಗಾರಪ್ಪನವರು ನಿಮ್ಮ ಬಗ್ಗೆ ಮಾತನಾಡಿದರು ಅದನ್ನೆಲ್ಲಾ ಕೇಳಿಕೊಂಡು ಕುಳಿತ್ತಿದ್ದೀರಿ. ಈಗ ನಾವೇನಾದರೂ ಹೇಳಿದರೆ ನಿಮಗೇಕೆ ಇಷ್ಟು ಕೋಪ.

ಶ್ರೀ ಆರ್. ಎಲ್. ಜಾಲಪ್ಪ.—ನೀವೂ ಕೂಡ ಆ ಲೆವಲ್‌ಗೆ ಬರುವುದಾದರೆ ಸಂತೋಷ

ಶ್ರೀ ರಾಮಕೃಷ್ಣ ಹೆಗಡೆ.—ಅವರು ಟೀಕೆ ಮಾಡಿದರು. ಆದರೆ ನೀವು ಆ ಲೆವಲ್‌ಗೆ ಬರುತ್ತೀರೆಂದು ನಾವು ಯೋಚನೆ ಮಾಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬಂಗಾರಪ್ಪನವರು ಏನಾದರೂ ಟೀಕೆ ಮಾಡಿದರೆ ಸ್ವಾಗತಿಸುತ್ತೀರಿ. ಇನ್ನೊಬ್ಬರು ಟೀಕೆ ಮಾಡಿದರೆ ತಮಗೆ ಏತಕ್ಕೆ ಇಷ್ಟು ಕೋಪ ? ಟೀಕೆಯನ್ನು ಸ್ವೀಕರಿಸುವ ರೀತಿಯಲ್ಲಿ ತಾವು ಇಟ್ಟುಕೊಳ್ಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ನಾವು ಟೀಕೆ ಮಾಡುವುದರಲ್ಲಿ ಒಂದು ಕನ್‌ಸ್ಟ್ರಕ್ಟೀವ್ ಅಪ್ರೋಚ್ ಇದೆ. ಅದನ್ನು ಇಟ್ಟು ಕೊಂಡು ನಾವು ಟೀಕೆ ಮಾಡುತ್ತೇವೆ. ಸುಮ್ಮನೆ ಟೀಕೆ ಮಾಡಬೇಕು ಎಂದು ಉದ್ದೇಶ ಇಟ್ಟು ಕೊಂಡು ಟೀಕೆ ಮಾಡುವುದಿಲ್ಲ.

ಅಧ್ಯಕ್ಷರು.—ತಾವು ಭಾಷಣವನ್ನು ೫–೪೫ಕ್ಕೆ ಮುಕ್ತಾಯಮಾಡಬೇಕು.

ಶ್ರೀ ಆರ್, ವೆಂಕಟರಾಮಯ್ಯ. ನಾನು ಹೇಳುವುದು ನಿಮ್ಮ ಪಾರ್ಟಿ ಬಗ್ಗೆ ನೀವು ಏನು ಯೋಚನೆ ಮಾಡುತ್ತೀರಿ ಅದರ ಬಗ್ಗೆ ನಾನು ಹೇಳುವುದು ಇಷ್ಟೆ. ಏನೆಂದರೆ ನೀವು ಡಿಸಿಡೆಂಟ್ಸ್ ಆಗಕೂಡದು, ಇದಕ್ಕೆ ಅವಕಾಶ ಕೊಡಕೂಡದು ನೀವು ಒಗ್ಗಟ್ಟಾಗಿ ಇರಬೇಕು ಎಂದು ಹೇಳುತ್ತೇನೆ.

೫–೩೦ ಪಿ. ಎಂ.

ನಿಮ್ಮ ಪಕ್ಷದ ಸದಸ್ಯರಲ್ಲಿಯೇ ಈ ರೀತಿ dissidents ಬರಬಾರದು, ಅದು ಬಹಳ ಅನ್ಯಾಯ ಎಂದು ನಾನು ಹೇಳುತ್ತಿರುವುದು. ಈ ಪೇಪರ್‌ನಲ್ಲಿ ಬಂದಿರುವುದನ್ನು ನಾನು ಪೂರ್ತಿ ಓದಿ ಮುಗಿಸುವುದಕ್ಕೆ ಮೊದಲೇ ತಾವು ಇಷ್ಟೊಂದು ಆತುರ ಮಾಡಿದರೆ ಹೇಗೆ ?

Sri V.N. Subba Rao father stated:—

"Even inside the janata party itself, a fear is growing that the new system of democratic decentralisation might once again revive the hegemony of the once powerful vested intersts invaribly represented br the major communities. It would not help the party to brush aside this fear in its own long-term intrests and also in the interests of a healthy socio-political ethos".

ಈ ಒಂದು ಸೆಟಪ್ ಏನಿದೆ. ಇದರಿಂದ ಭಯ ಬಂದಿದೆ, ಇದರಿಂದ ನಾವು ೨೦–೩೦ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತಿದ್ದೇವೆ. ಬ್ಯಾಕ್‌ವರ್ಡ್–ಕ್ಲಾಸ್ ಮೂವ್‌ಮೆಂಟ್ ಏನಿದೆ, ಇದೂ ಸಹ ಹಿಂದಕ್ಕೆ ಹೋಗುತ್ತಿದೆ ಎಂದು ಹೇಳಿದ್ದಾರೆ. ಈ ಕಾರಣದಿಂದ ನಮಗೆ ಒಳ್ಳೆಯ ಸ್ಟ್ರಕ್ಚರಲ್ ಡೆಮಾಕ್ರಸಿ ಬೇಕು ಎನ್ನುವುದಾದರೆ, ಇದಕ್ಕೆ ಸಂಬಂಧಪಟ್ಟಂತೆ ನಾವು ಮೊದಲು ಗಟ್ಟಿಯಾದ ತಳಪಾಯವನ್ನು ಹಾಕಬೇಕಾಗುತ್ತದೆ. ನಮ್ಮಲ್ಲಿರುವ ಬಡತನ ಹೋದರೆ ಮಾತ್ರ ಡೆಮಾಕ್ರಟಿಕ್ ಸೆಟಪ್ ಇಂಪ್ರೂವ್ ಆಗುತ್ತದೆ. ನಮ್ಮ ಸ್ನೇಹಿತರು ಸಹ ಇದೇ ವಿಚಾರವನ್ನು ಹೇಳಿದ್ದಾರೆ. In the background paper of the Govt. of Karnataka, (Economic & Planning Council), it is mentioned clearly. ಇದರಲ್ಲಿ ಏನು ಹೇಳಿದ್ದಾರೆಂಬುದನ್ನು ನಾನು ಸ್ವಲ್ಪ ಓದಿ ಹೇಳುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಜಮೀನಿನ

ಹಂಚಿಕೆ ಸರಿಯಾಗಿ ಆಗಿಲ್ಲ. ಅದೇ ಪಶ್ಚಿಮಬಂಗಾಳದಲ್ಲಿ ೧೮ ಲಕ್ಷ ಜನರಿಗೆ ಜಮೀನನ್ನು ಹಂಚಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ೨೫ ಸಾವಿರ ಜನರಿಗೂ ಹಂಚಿದ್ದಾರೆ. ಇದಕ್ಕೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡಿದ್ದರೆ ಇಲ್ಲಿಯವರೆಗೆ ೫ ಲಕ್ಷ ಜನರಿಗೆ ಜಮೀನು ಸಿಗುತ್ತಿತ್ತು. ಆದರೆ ಈ ತಿದ್ದುಪಡಿ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಹೋಗಿದೆ ಎಂದು ಮಾನ್ಯ ಬೊಮ್ಮಾಯಿ ಅವರು ಹೇಳುತ್ತಾರೆ. ನೀವು ಜಮೀನನ್ನು ಹಂಚದಿದ್ದರೆ ಈ ಜನರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲ. ಇದರ ಜೊತೆಗೆ ನಾವು ಅಂದುಕೊಂಡಿರುವ ಡೆಮಾಕ್ರೆಟಿಕ್ ಸೆಟಪ್ ಬೆಳೆಯುವುದಿಲ್ಲ.

I will read from this background document . -

"Land deing the main source of rural economy, iand reforms is one thing that could promoted and make them to participate democracy in the Village. There is no point in talking of involving panchayats or other local bodies in the topic of rural devlopment in the structure which is unequal. The panahayat will become the creation of the landlord and this is confirmed by any number of studies. Infact professor Amrit Sen in his recent book his introduced the concept of ownership......wherein he specifically mentioned the importance of owning land. pologies for non implementation of the agrarian reform that it is not possible to distribute all the surplus lands.

Though Infact Karnataka is one of the States where land-reforms particularly tenancy reforms is implemented effectively, however we are not sure whether the surplus land distributed, is successful".

ಈಗ ನಮ್ಮ ರಾಜ್ಯದಲ್ಲಿ ಹೆಚ್ಚುವರಿ ಜಮೀನು ಏನಿದೆ, ಅದು ಸರಿಯಾಗಿ ಹಂಚಿಕೆ ಆಗಿಲ್ಲ. ಸರ್ಕಾರದ ವಶದಲ್ಲಿ ಸಾಕಷ್ಟು ಜಮೀನು ಇದೆ. ಆದರೆ ಹಂಚಿಕೆ ಆಗಿಲ್ಲ. ಈ ಎಲ್ಲಾ ಜಮೀನನ್ನು ಬಡವರಿಗೆ ಹಂಚಿದ್ದರೆ ನಮ್ಮದು ಖಂಡಿತವಾಗಿಯೂ ಸ್ಟ್ರಕ್ಚರಲ್ ಡೆಮಾಕ್ರಸಿ ಆಗುತ್ತಿತ್ತು. ಇದರ ಜೊತೆಗೆ ಬಡವರು ಸಹ ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತಹ ಒಂದು ಅವಕಾಶ ಇರುತ್ತಿತ್ತು. ಈಗ ಈ ವಿಚಾರದಲ್ಲಿ ವೆಸ್ಟೆಡ್ ಇಂಟರೆಸ್ಟ್ಸ್ ಅಪ್ಪರ್-ಹ್ಯಾಂಡ್ ಆಗಿದ್ದಾರೆಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಹೇಳಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳನ್ನು ನಡೆಸಿದರು. ಪಶ್ಚಿಮಬಂಗಾಳದಲ್ಲಿ ಇರುವಂತಹ ಪದ್ಧತಿಯನ್ನೇ ಇಲ್ಲಿಯೂ ಅನುಸರಿಸಬೇಕೆಂದು ಕೊಂಡು ಚುನಾವಣೆ ನಡೆಸಿದರು.

I will read a sentence from the "Rural Development planning under the Left Government in west Bengal". ಅಲ್ಲಿ ಗ್ರಾಮ ಮಟ್ಟದಲ್ಲಿ ಶೇಕಡಾವಾರು ಪ್ರಮಾಣದಲ್ಲಿ ಯಾರು ಯಾರು ಚುನಾಯಿತರಾಗಿದ್ದಾರೆಂದರೆ, ಎಂದರೆ, Owner Cultivator 50,7 elected to Gram Panchayats. Teachers. 14, Unemployed 7.5. Landless labourers 4.87, of the Panchyat members elected over 80 as shown in Table I came from such ocoupational groups as Owner. Cultlvators, teachera, unemployed landless labourers, Bargadars. artisans nnd among 71 shown in table 2 came from the small and marginal farmers with land holding below 5 acres. ಇದನ್ನು ನೋಡಿದಾಗ ನಾವು ಅಂದುಕೊಂಡಿರುವ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಆ ರಾಜ್ಯದ ಪರಿಸ್ಥಿತಿಯೇ ಬಂದಿದೆಯೇ ಎಂಬುದನ್ನು ಗಮನಿಸಬೇಕಾಗಿದೆ. ಎಲೆಕ್ಷನ್ ನಡೆದಿರುವುದರಲ್ಲಿ ದುರದೃಷ್ಟವಶಾತ್ ನಾವು ಬಹಳ ತೊಂದರೆಗೆ ಈಡಾದೆವು. ಡೀಸೆಂಟ್ರಲೈಸ್ ಆಗಬೇಕು ಎನ್ನುವುದನ್ನು ಒಪ್ಪುವಂಥವನು ನಾನು. ದುರದೃಷ್ಟವಶಾತ್ ಈ ವ್ಯವಸ್ಥೆಯಲ್ಲಿ

ವೆಸ್ಟೆಡ್ ಇಂಟರೆಸ್ಟ್ ಎಲೆಕ್ಟೋರೇಟನ್ನು ಸರಿಯಾಗಿ ದುರುಪಯೋಗ ಮಾಡಿಕೊಂಡರು ಎಂದು ಹೇಳಬಹುದು. ಸ್ವಾಮಿ, ಇವತ್ತು ನನಗೆ ಆನ್ಸರ್ ಬಂತು. ಅದರ ಪ್ರಕಾರ ನಮ್ಮ ರಾಜ್ಯದಲ್ಲಿ ಒಂದು ವಾರದಲ್ಲಿ ಸರಾಸರಿ ಹೆಂಡ, ಸಾರಾಯಿ, ಇತರೆ ಮಾದಕ ಪಾನೀಯಗಳ ಮಾರಾಟ ಅಂದರೆ ಕುಡಿದದ್ದು ವಿವರ ಹೀಗಿದೆ. ಸಾರಾಯಿ ೭ ಲಕ್ಷ ೯೨ ಸಾವಿರದ ೧೨೪ ಲೀಟರ್‌ಗಳು. ಎಲೆಕ್ಷನ್ ಪೀರೀಡ್‌ನಲ್ಲಿ ಕುಡಿದದ್ದು ೧೮ ಲಕ್ಷ ಚಿಲ್ಲರೆ ಲೀಟರುಗಳು ಭಾರತೀಯ ಮದ್ಯಗಳು ೧,೫೭,೧೧೧.೦೦ ಲೀಟರುಗಳು, ಎಲೆಕ್ಷನ್ ಪೀರೀಡ್‌ನಲ್ಲಿ ೩,೩೧,೯೪೧ ಲೀಟರುಗಳು. ಬೀರ್ ೪,೩೦,೦೪೯.೦೦ ಲೀಟರುಗಳು, ಎಲೆಕ್ಷನ್ ಪೀರೀಡ್‌ನಲ್ಲಿ ೯,೪೭,೪೭೬ ಲೀಟರುಗಳು. ಹೆಂಡ ೩೭,೯೯,೦೪೭.೦೦ ಲೀಟರುಗಳು, ಎಲೆಕ್ಷನ್ ಪೀರೀಡ್‌ನಲ್ಲಿ ೮೫,೩೦,೮೧೪ ಲೀಟರುಗಳು. ಕಡೆಗೆ ಇದರ ಡಬಲ್ ಆಗಿದೆ. ಇವೊತ್ತು ಈ ರೀತಿ ಸರ್ಕಾರ ಆನ್ಸರ್ ಕೊಟ್ಟಿರುವುದು. ಇದರಿಂದ ನಮಗೆ ಗೊತ್ತಾಗುತ್ತದೆ. ನಿಜವಾಗಿ ಅವರು ಕೊಟ್ಟಿರುವ ಲೆಕ್ಕಾಚಾರದ ಪ್ರಕಾರ ಖರ್ಚಾಗಿರುವುದು ಇಷ್ಟು. ಲೆಕ್ಕ ಇದರಲ್ಲಿ ಇಲ್ಲದೆ ಎಷ್ಟು ಖರ್ಚಾಗಿದೆಯೋ ಗೊತ್ತಿಲ್ಲ. ಇದರ ಬಗ್ಗೆ ಒಂದೇ ಒಂದು ಮಾತು ಹೇಳಬೇಕು. ಅಂದರೆ ಬಡವರನ್ನು ವೆಸ್ಟೆಡ್ ಇಂಟರೆಸ್ಟ್ಸ್ ಯಾವ ಮಟ್ಟಕ್ಕೆ ತೆಗೆದುಕೊಂಡು ಹೋದರು, ಯಾವ ರೀತಿ ದುರುಪಯೋಗಪಡಿಸಿಕೊಂಡರು ಇದನ್ನು ನಿಜವಾಗಿಯೂ ಬಹಳ ಸಂಕಟದಿಂದ ಹೇಳುತ್ತಾ ಇದ್ದೇನೆ. ಇದರ ಬಗ್ಗೆ ಸಂತೋಷಪಡಬೇಕಾಗಿಲ್ಲ. ಇನ್ನೊಂದು ವಿಷಯವನ್ನು ಹೇಳುವುದಾದರೆ ನಮ್ಮ ರೈತರ ಬಗ್ಗೆ ಸರ್ಕಾರದವರು ಕೊಡಬೇಕಾಗಿರುವ ಅನುಕೂಲಗಳು ಏನು ಎನ್ನುವುದು. ನಾವು ೮೦ ಪರ್ಸೆಂಟ್ ಇದ್ದೇವೆ. ೮೦ ಪರ್ಸೆಂಟ್ ಇರತಕ್ಕ ರೈತರು ಬೆಳೆದ ಬೆಳೆಗೆ ನ್ಯಾಯಬೆಲೆ ಕೊಡಬೇಕು ಎನ್ನುವುದು. ಕೇಂದ್ರ ಸರ್ಕಾರದವರು ಕೊಡಬೇಕು, ಇಲ್ಲದೇ ಇದ್ದರೆ ರಾಜ್ಯಸರ್ಕಾರ ಕೊಡಬೇಕು. ಭತ್ತ, ಶೇಂಗಾ ಬೆಳೆದರೂ ನ್ಯಾಯಬೆಲೆ ಸಿಕ್ಕುತ್ತಿಲ್ಲ. ಹತ್ತಿ ಶೇಂಗಾ ಬೆಳೆಗೆ ಕರ್ನಾಟಕದಲ್ಲಿ ಎಂತಹ ಪರಿಸ್ಥಿತಿ ಇದೆ ಎನ್ನುವುದು ಗೊತ್ತಿದೆ. ರೇಷ್ಮೆ ಬೆಲೆ ಕಡಿಮೆಯಾಗುತ್ತಿದೆ. ಹೀಗೆ ರೈತರ ಬಗ್ಗೆ ಒಂದು ಮಾತೂ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಅವರ ಪ್ರಕಾರ ಕೃಷಿ ಕಾರ್ಮಿಕರು ಮೂರನೇ ಒಂದು ಭಾಗ ಇದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ ಕೃಷಿ ಕಾರ್ಮಿಕರ ಬಗ್ಗೆ ಒಂದು ಮಾತೂ ಇಲ್ಲ. ಈಗ ಒಂದು ಪೇ ಕಮಿಷನ್ ಆಯಿತು. ನೌಕರರಿಗೆ ಸಂತೋಷ ಅವರಿಗೆ ಸಂಬಳ ಕೊಡೋಣ. ಇನ್ನೂ ಸಂಬಳ ಜಾಸ್ತಿ ತೆಗೆದುಕೊಳ್ಳಲಿ, ನನ್ನ ಅಬ್ಜಕ್ಷನ್ ಇಲ್ಲ. ಆದರೆ ತಾಲ್ಲೂಕು ಆಫೀಸ್, ರೆವಿನ್ಯೂ ಆಫೀಸುಗಳಲ್ಲಿ ಲಂಚಾವತಾರ ತುಂಬಿತುಳುಕುತ್ತಿದೆ, ದುರದೃಷ್ಟವಶಾತ್ ಅದು ಕಂಟ್ರೋಲ್‌ಗೆ ಬರುತ್ತಿಲ್ಲ. ಎಷ್ಟು ತುಂಬಿತುಳುಕುತ್ತಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದರಿಂದ ರೈತರ ಶೋಷಣೆ ಜಾಸ್ತಿಯಾಗುತ್ತಿದೆ. ಇನ್ನು ಮುಂದಾದರೂ ನಾವು ಸಂಬಳ ತೆಗೆದುಕೊಂಡಿದ್ದೇವೆ, ನಮ್ಮ ರೈತರಿಗೆ ನ್ಯಾಯವಾದ ಸೇವೆ ಮಾಡೋಣ ಎಂಬ ಅಭಿಪ್ರಾಯ ಬರಲಿ. ಇದರ ಬಗ್ಗೆ ಯಾರು ಸಂಕಟಪಡಬೇಕಾಗಿದೆ. ಏಕೆಂದರೆ ಗ್ರಾಮೀಣ ಭಾಗಗಳಲ್ಲಿ ನಾವು ಹೋದರೆ, ಎಲ್ಲಿ ಹೋದರೂ ಕೂಡ ತಾಲ್ಲೂಕು ಆಫೀಸ್‌ನಲ್ಲಾಗಲಿ ಎರಡು ಕೈ ಒಡ್ಡುತ್ತಾರೆ. ಮೊದಲಾದರೂ ಭಯ ಇತ್ತು, ಈಗ ಭಯ ಇಲ್ಲ. ಶ್ರೀಮಾನ್ ಗುಂಡೂರಾಯರ ಕಾಲದಲ್ಲೋ ಏನೋ ಈ ಕಾಂಗ್ರೆಸ್ ಸಂಸ್ಕೃತಿ ಬೆಳೆದು ಬಂತು. ಅದು ಸ್ವಲ್ಪ ದಿವಸ ಏನಾದರೂ ಕಡಿಮೆಯಾಗಿದೆಯೋ, ದುರದೃಷ್ಟವಶಾತ್ ಕಡಿಮೆಯಾಗಿಲ್ಲ, ರಾಜ್ಯಪಾಲರ ಭಾಷಣದ ೨ನೇ ಪೇಜ್ ನಲ್ಲಿ ೩ನೇ ಪ್ಯಾರಾದಲ್ಲಿ:

> ''ಕರ್ನಾಟಕವು ಶಾಂತಿ ನೆಮ್ಮದಿಗಳಿಗಾಗಿ ಹಾಗೂ ಮತೀಯ ಸಾಮರಸ್ಯಕ್ಕಾಗಿ ಯಾವಾಗಲೂ ಪ್ರಸಿದ್ಧವಾಗಿದೆ. ದುರದೃಷ್ಟವಶಾತ್ ವೃತ್ತ ಪತ್ರಿಕೆಯೊಂದರಲ್ಲಿ ಪ್ರಕಟವಾದ ಕತೆಯು ಒಂದು ಕೋಮಿನವರ ಭಾವನೆಗಳನ್ನು ಕೆರಳಿಸಿದ್ದು ಕರ್ನಾಟಕದ ಈ ಖ್ಯಾತಿಗೆ ಕಲಂಕ ತಟ್ಟಿತು.''

ಎಂದು ಹೇಳಿದ್ದಾರೆ, ಇದು ಬಿಟ್ಟರೆ ಬೇರೆ ಏನಿಲ್ಲ ಎಂದು ಅದರಲ್ಲಿ ಇದೆ. ಮಾನ್ಯ ಸಭಾಧ್ಯಕ್ಷರೇ ಅವರು ಹೇಳಿರುವುದು ಸರಿಯಲ್ಲ. ಅವರು ಶಾಂತಿ ಪರಿಸ್ಥಿತಿ ಬಗ್ಗೆ ಹೇಳಿದ್ದಾರೆ. ನಿಜವಾಗಿಯೂ ನಮ್ಮ ಕರ್ನಾಟಕದಲ್ಲಿ ದುರದೃಷ್ಟವಶಾತ್ ಡಕಾಯಿತಿಗಳು ಕೊನೆ ಮೊದಲು ಇಲ್ಲದೆ ನಡೆಯುತ್ತಿದೆ. ಏತಕ್ಕೆ ಹೀಗೆ ಆಯಿತು ಎನ್ನುವುದನ್ನು ಯೋಚನೆ ಮಾಡುವುದಕ್ಕಾಗುವುದಿಲ್ಲ, ಹಳ್ಳಿ ಜೀವನದಲ್ಲಿ ಗ್ರಾಮೀಣ ಜೀವನದಲ್ಲಿ ಕೂಡ ಒಂದು ಭದ್ರತೆ ಇಲ್ಲದಂತಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಕೂಡ ಶಾಂತಿಯುತ ವಾತಾವರಣ ಇದೆಯೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾಂಗ್ರೆಸ್ ಸರ್ಕಾರದಲ್ಲಿ ಏನಾದರೂ ತೊಂದರೆಯಾಗಿತ್ತೇನು ?

ಶ್ರೀ ಆರ್. ವೆಂಕಟರಾಮಯ್ಯ.—ಕಾಂಗ್ರೆಸ್‌ನವರು ಸೃಷ್ಟಿ ಮಾಡಿದಂಥ ಸಂಸ್ಕೃತಿ ಕಡಿಮೆ ಯಾಗಲಿಲ್ಲ, ಇನ್ನೂ ಹೆಚ್ಚಾಗಿದೆ. ನಾನು ರೈತರ ಬಗ್ಗೆ ಹೇಳುತ್ತಿದ್ದೆ. ಗ್ರಾಮೀಣ ಪ್ರದೇಶ ದಲ್ಲಿರುವ ೫೦ ಲಕ್ಷ ಜನ ರೈತರಿಗೆ ಸಬ್ಸಿಡೈಸ್ಡ್ ಫುಡ್ ಮತ್ತು ಕ್ಲಾತ್ ಇವರ ಲೆಕ್ಕದ ಪ್ರಕಾರ ಕೊಡಬೇಕಾಗಿತ್ತು. ಈಗ ೩೧ ಲಕ್ಷ ಜನಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇನ್ನು ೧೯ ಲಕ್ಷ ಜನಕ್ಕೆ ಕೊಟ್ಟಿಲ್ಲ. ಈ ವಿಚಾರದಲ್ಲಿ ಕೂಡ ಸರ್ಕಾರದವರು ಗಂಭೀರವಾಗಿ ಯೋಚನೆ ಮಾಡಿ ಯಾರಿಗೆ ಕೊಟ್ಟಿಲ್ಲವೋ ಅಂಥವರಿಗೂ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಜಾಸ್ತಿ ಮಾತನಾಡಬೇಕಾಗಿದೆ. ೧೯೮೩ರಲ್ಲಿ ಮಾನ್ಯ ನಜೀರ್ ಸಾಹೇಬರು ಕಮ್ಯಾಂಡಬಲ್ ಆಗಿ ಕೆಲಸ ಮಾಡಿದರು. ಈಗ ಕೊಳವೆ ಬಾವಿಗಳಿಗೆ ಜೋಡಿಸಿರುವ ಪಂಪುಗಳ ರಿಪೇರಿ ಕೂಡ ಇಲ್ಲ ದಂತಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತ್ತು ಬಂದಮೇಲೆ ರಿಪೇರಿ ವ್ಯವಸ್ಥೆ ಮಾಡುತ್ತಾರೋ, ಬಿಟ್ಟುಬಿಡುತ್ತಾರೋ ಗೊತ್ತಿಲ್ಲ. ರಾಜ್ಯದಲ್ಲಿರುವ ಎಷ್ಟೋ ಹ್ಯಾಮ್ಲೆಟ್‌ಗಳಿಗೆ ಇನ್ನು ಕುಡಿಯುವ ನೀರಿನ್ನು ಒದಗಿಸುವುದಕ್ಕೆ ಆಗಿಲ್ಲ. ಆರು ತಿಂಗಳ ಮೊದಲು ಕುಡಿಯುವ ನೀರಿನ ಬಗ್ಗೆ ಏನೊಂದು ಆದ್ಯತೆ ಕೊಟ್ಟಿದ್ದರೂ ಅದನ್ನು ಈಗ ಕೊಟ್ಟಿಲ್ಲ. ಇನ್ನು ಹಳ್ಳಿಗಳಿಗೆ ರಸ್ತೆ ನಿರ್ಮಾಣದ ವಿಚಾರದಲ್ಲಿ ಕೂಡ ಸರ್ಕಾರ ಗಮನಕೊಟ್ಟಿಲ್ಲ. ಬೇಸಿಕ್ ಅಮೇನಿಟೀಸ್‌ಗಳೇ ಇಲ್ಲ. ಸ್ಕೂಲು ಕಟ್ಟಡಗಳು ಇಲ್ಲ, ೧೫೦ ಜನ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇರುತ್ತಾರೆ. ಒಂದು ದಿವಸ ಮೇಸ್ಟ್ರು ಬರದೇ ಇದ್ದರೆ ಮಕ್ಕಳ ಗತಿ ಏನು? ಎನ್.ಆರ್.ಇ.ಪಿ. ಯೋಜನೆಯಲ್ಲಿ ರಸ್ತೆಗಳನ್ನು ಮಾಡಿಸಿದ್ದೇವೆಂದು ಹೇಳುತ್ತಾರೆ. ಅದು ಕಾಣುತ್ತಿಲ್ಲ. ಐ.ಆರ್.ಡಿ.ಪಿ. ಯೋಜನೆ ಯಲ್ಲಿ ಜಾಸ್ತಿ ಅನುಕೂಲ ಮಾಡಿಕೊಟ್ಟಿದ್ದೇವೆಂದು ಹೇಳುತ್ತಾರೆ. ತಮಗೆ ಗೊತ್ತಿದೆ, ಒಂದು ಹಳ್ಳಿಗೆ ೩೩ ಜನಕೆ ಕೊಡುತ್ತಾರೆ, ಯಾವ ಬ್ಯಾಂಕಿಗೆ ಹೋಗಲಿ, ಸರ್ಕಾರದವರು ಹೇಳಿದರೂ ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ೧೩ ಲಕ್ಷ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕಳೆದ ೩೮ ವರ್ಷಗಳಿಂದ ಕೊಟ್ಟಿರುವುದನ್ನು ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ೩೬೦ ಹಳ್ಳಿಗಳು ಇವೆ. ೧೮೦ ಮನೆಗಳನ್ನು ಕೊಡುತ್ತಾರೆ. ಮನೆಗಳಿಗಾಗಿ ೫,೦೦೦ ಅರ್ಜಿಗಳು ಇವೆ. ಈ ವರ್ಷ ವನ್ನು ಇಂಟರ್‌ನ್ಯಾಷನಲ್ ಇಯರ್ ಆಫ್ ಹೌಸಿಂಗ್ ಎಂದು ಕರೆದಿದ್ದಾರೆ. ಈ ವರ್ಷ ಹೆಚ್ಚು ಮನೆಗಳನ್ನು ಕೊಡಬೇಕೆಂದು ಹೇಳುತ್ತೇನೆ. ೨೦ ಅಂಶಗಳ ಕಾರ್ಯಕ್ರಮದ ಮೇರೆಗೆ ಸೈಟುಗಳನ್ನು ಕೊಡತಕ್ಕಂಥಾದ್ದು ಇದ್ದು ಅದನ್ನು ಈಗ ಬಿಟ್ಟಿದ್ದಾರೆ. ಲ್ಯಾಂಡ್ ಅಕ್ವಿಜಿಷನ್ ಪ್ರೊಪೋಸಲ್ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಗ್ರಾಮಾಂತರ ಪ್ರದೇಶಗಳ ವಿಚಾರದಲ್ಲಿ ಅನುಕೂಲಕರವಾದಂಥ ಒಂದು ಮಾತು ಕೂಡ ಇಲ್ಲ.

ಅಧ್ಯಕ್ಷರು.—ತಮಗೆ ಟೈಮ್ ಆಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಆಡಳಿತ ವ್ಯವಸ್ಥೆಯಲ್ಲಿ ಲಂಚದ ಹಾವಳಿ ತುಂಬಾ ಜಾಸ್ತಿ ಯಾಗಿದೆ. ಇದನ್ನು ತಪ್ಪಿಸುವ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳ ಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಪ್ರಕಟಣೆ.

ಈ ದಿನ ಸಮಾವೇಶಗೊಂಡ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯು ಸದನವನ್ನು ೧೩ನೇ ಫೆಬ್ರವರಿ, ೧೯೮೭ರಂದು ಮುಕ್ತಾಯಗೊಳಿಸಿ ಮತ್ತೆ ದಿನಾಂಕ ೨೭ನೇ ಫೆಬ್ರವರಿ, ೧೯೮೭ರಂದು ಸಭೆ ಸೇರಬೇಕೆಂದು ತೀರ್ಮಾನಿಸಿತು.

೨೭ನೇ ಫೆಬ್ರವರಿ, ೧೯೮೭ರಿಂದ ಸದನದ ಕಾರ್ಯಕಲಾಪಗಳನ್ನು ಕೆಳಕಂಡಂತೆ ನಡೆಸಬೇಕೆಂದು ತೀರ್ಮಾನಿಸಿತು.

೧೧-೨-೧೯೮೭ ಮತ್ತು ೧೨-೨-೧೯೮೭	:	ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವದ ಚರ್ಚೆ ಮುಕ್ತಾಯ,
೧೩-೨-೧೯೮೭ (ಬೆಳಗ್ಗೆ ಉಪವೇಶನ)	:	ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ